ಸಂಪುಟ: 01 ಸಂಚಿಕೆ: 08 ಪುಟ: 04 ಬೆಲೆ: 02 ಶುಕ್ರವಾರ ಜೂನ್ 12 2026 ಮೊ: 7411699198/7406928404

# ಅಜಾತ ಶತ್ರು

ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ
ಸತ್ಯದ ಧ್ವನಿ... ಜನರ ನುಡಿ....
ಕನ್ನಡ ದಿನ ಪತ್ರಿಕೆ
ಪ್ರದೀಪಕುಮಾರ
ಸಂಪಾದಕರು




Volume:01 Issue:08 Pages:04 Price:02 FRIDAY JUNE 12 2026 RNI NO: KNKAN/26/A4008 E-mail:ajathashathru2026@gmail.com

## ವಿಧಾನಪರಿಷತ್ ಚುನಾವಣೆ :ಪಕ್ಷೇತರ ಶಾಸಕರಿಗೆ ಭಾರೀ ಡಿಮ್ಯಾಂಡ್

**ಬೆಂಗಳೂರು: ಇದೇ ತಿಂಗಳ 18 ರಂದು ವಿಧಾನಸಭೆಯಿಂದ ವಿಧಾನ ಪರಿಷತ್ ಸ್ಥಾನಗಳಿಗೆ ನಡೆಯಲಿರುವ ಚುನಾವಣೆಯಲ್ಲಿ ಪಕ್ಷೇತರ ಶಾಸಕರಿಗೆ ಭಾರೀ ಡಿಮ್ಯಾಂಡ್ ಬಂದಿದೆ. ವಿಧಾನ ಪರಿಷತ್ತಿನ 7 ಸ್ಥಾನಗಳ ಚುನಾವಣೆಯು ರಾಜಕೀಯ ವಲಯದಲ್ಲಿ ಸಾಕಷ್ಟು ಕುತೂಹಲ ಮೂಡಿಸಿದೆ. ಈ ಚುನಾವಣೆಯಲ್ಲಿ ಪಕ್ಷೇತರ ಶಾಸಕರು ಮತ್ತು ಅತೃಪ್ತ ಶಾಸಕರ ಪಾತ್ರ ನಿರ್ಣಾಯಕವಾಗಿದೆ. ಯಾವುದೇ ಒಂದು ರಾಜಕೀಯ ಪಕ್ಷದ ಅಧಿಕೃತ ಅಭ್ಯರ್ಥಿಗಳ ಸೋಲು ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಲಿರುವ ಪಕ್ಷೇತರ ಶಾಸಕರನ್ನು ಸೆಳೆಯಲು ಆಡಳಿತರೂಢ ಕಾಂಗ್ರೆಸ್ ಮತ್ತು ಪ್ರತಿಪಕ್ಷ ಜೆಡಿಎಸ್ ನಡುವೆ ಭಾರೀ ಜಿದ್ದಾಜಿದ್ದಿನ ಸ್ಪರ್ಧೆ ಏರ್ಪಟ್ಟಿದೆ.**



ಕಾಂಗ್ರೆಸ್ ಮತ್ತು ಜೆಡಿಎಸ್ ಎರಡೂ ಪಕ್ಷಗಳು ತಮ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ಶಾಸಕರನ್ನು ಒಗ್ಗೂಡಿಸುವ ಕಸರತ್ತು ನಡೆಸುತ್ತಿವೆ. ಬಿಜೆಪಿ ಬಂಡಾಯ ಶಾಸಕರು ಯಾರತ್ತ ವಾಲುತ್ತಾರೆ ಎಂಬುದು ಮತ್ತು ಜೆಡಿಎಸ್‌ನ ಹಿರಿಯ ನಾಯಕ ಜಿ.ಟಿ.ದೇವೇಗೌಡ ಅವರ ನಿಲುವು ಏನು ಎಂಬುದು ಈ ಚುನಾವಣೆಯ ಅತ್ಯಂತ ಕುತೂಹಲಕಾರಿ ಅಂಶಗಳಾಗಿವೆ. ಬಿಜೆಪಿ 2 ಸ್ಥಾನಗಳನ್ನು ಸುಲಭವಾಗಿ ಗೆಲ್ಲುವ ಸ್ಥಿತಿಯಲ್ಲಿದೆ. ಆದರೆ, ಜೆಡಿಎಸ್‌ನೊಂದಿಗೆ ಮೈತ್ರಿ ಮಾಡಿಕೊಂಡಿದ್ದರೂ, ಹೆಚ್ಚುವರಿ ಮತಗಳಿಗಾಗಿ ಬಿಜೆಪಿ ಬಂಡಾಯ ನಾಯಕರು ಮತ್ತು ಸ್ವತಂತ್ರರ ಮೊರೆ ಹೋಗುವ ಅನಿವಾರ್ಯತೆ ಇದೆ. ಬಿಜೆಪಿ ಮತ್ತು ಕಾಂಗ್ರೆಸ್‌ನಿಂದ ಹೊರಬಂದಿರುವ ಅಥವಾ ಬಂಡಾಯವೆದ್ದಿರುವ ಶಾಸಕರು (ಉದಾಹರಣೆಗೆ ಎಸ್.ಟಿ. ಸೋಮಶೇಖರ್, ಶಿವರಾಮ್ ಹೆಬ್ಬಾರ್, ಬಸನಗೌಡ ಪಾಟೀಲ್ ಯತ್ನಾಳ್) ಯಾರಿಗೆ ಬೆಂಬಲ ನೀಡುತ್ತಾರೆ ಎಂಬುದು ಈ ಚುನಾವಣೆಯ ಫಲಿತಾಂಶವನ್ನು ನಿರ್ಧರಿಸಲಿದೆ.

ಸಂಖ್ಯೆಗಳ ಲೆಕ್ಕಾಚಾರದಲ್ಲಿ ಯಾರೂ ಸಂಪೂರ್ಣ ಸುರಕ್ಷಿತವಾಗಿಲ್ಲದ ಕಾರಣ, ಶಾಸಕರನ್ನು ತಮತ್ತ ಸೆಳೆಯಲು ಪಕ್ಷಗಳು ಹರಸಾಹಸ ಪಡುತ್ತಿವೆ. ಇದೇ ಕಾರಣ-ಕ್ಕೆ ಪಕ್ಷೇತರರು ಮತ್ತು ಅತೃಪ್ತ ಶಾಸಕ-ರಿಗೆ ಈ ಚುನಾವಣೆಯಲ್ಲಿ ಹೆಚ್ಚಿನ ಡಿಮ್ಯಾಂಡ್ ಸೃಷ್ಟಿಯಾಗಿದೆ. ಮೇಲ್ನೋಟಕ್ಕೆ ಇದೊಂದು ಮಾಮೂಲಿನ ಚುನಾವಣೆಯಂತೆ ಕಂಡುಬಂದರೂ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ನಡುವಿನ ಹೋರಾಟ ಎಂದೇ ರಾಜಕೀಯ ವಲಯದಲ್ಲಿ ಬಿಂಬಿತವಾಗಿದೆ. ಶತಾಯಗತಾಯ ತಮ ತಮ ಅಭ್ಯರ್ಥಿಗಳನ್ನು ಗೆಲ್ಲಿಸಲು ತಮದೇ ಆದ ಕಾರ್ಯತಂತ್ರ ರೂಪಿಸುತ್ತಿರುವ ಡಿಕೆಶಿ ಮತ್ತು ಎಚ್‌ಡಿಕೆ ವಿಶೇಷವಾಗಿ ಪಕ್ಷೇತರ ಶಾಸಕರನ್ನು ಸೆಳೆಯಲು ಕಸರತ್ತು ಆರಂಭಿಸಿದ್ದಾರೆ. ಹೀಗಾಗಿ ಬಿಜೆಪಿಯಿಂದ ಉಚ್ಚಾಟನೆಗೊಂಡಿರುವ ಶಾಸಕರಾದ ಬಸನಗೌಡ ಪಾಟೀಲ್ ಯತ್ನಾಳ್ ಬಿಜಾಪುರ, ಎಸ್.ಟಿ.ಸೋಮಶೇಖರ್, ಯಶವಂತಪುರ ಶಿವರಾಮ್ ಹೆಬ್ಬಾರ್ ಯಲ್ಲಾಪುರ ಹಾಗೂ ಪಕ್ಷೇತರ ಶಾಸಕರಾದ ಲತಾ ಮಲ್ಲಿಕಾರ್ಜುನ್ ಹರಪನಹಳ್ಳಿ ಪುಟ್ಟಸ್ವಾಮಿಗೌಡ ಗೌರಿಬಿದನೂರು ಮತ್ತು ದರ್ಶನ್ ಪುಟ್ಟಣ್ಣಯ್ಯ ಮೇಲುಕೋಟೆ ಅವರುಗಳಿಗೆ ಎಲ್ಲಿಲ್ಲದ ಬೇಡಿಕೆ ಬಂದಿದೆ.

ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ನಡೆಯಲಿರುವ ಈ ದ್ವೈವಾರ್ಷಿಕ ಚುನಾವಣೆಯು ಸಂಖ್ಯಾಬಲದ ಆಟವಾಗಿದೆ. ಅಗತ್ಯವಿರುವ ಮತಗಳು: ಒಬ್ಬ ಅಭ್ಯರ್ಥಿಯ ಗೆಲುವಿಗೆ ಪ್ರಥಮ ಪ್ರಾಶಸ್ತ್ಯದ 28 ಮತಗಳ ಅಗತ್ಯವಿದೆ. 224 ಸದಸ್ಯ ಬಲದ ವಿಧಾನಸಭೆಯಲ್ಲಿ, ಪ್ರಸ್ತುತ 222 ಶಾಸಕರು ಮತ ಚಲಾಯಿಸಲಿದ್ದಾರೆ. (ಮಾಜಿ ಸಚಿವ ಡಿ ಸುಧಾಕರ್ ನಿಧನರಾಗಿರುವುದು ಹಾಗೂ ಮಾಜಿ ಸಚಿವ ವಿನಯ್ ಕುಲಕರ್ಣಿ ಅವರ ಶಾಸಕ ಸ್ಥಾನ ರದ್ದುಗೊಂಡಿರುವುದರಿಂದ ಎರಡು ಸ್ಥಾನಗಳು ಖಾಲಿ ಉಳಿದಿದೆ) ಕಾಂಗ್ರೆಸ್ ತನ್ನ 4 ಅಭ್ಯರ್ಥಿಗಳನ್ನು ಸುಲಭವಾಗಿ ಗೆಲ್ಲಿಸಬಲ್ಲದು. ಐದನೇ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳಲು ಕಾಂಗ್ರೆಸ್‌ಗೆ ಹೆಚ್ಚುವರಿ ಮತಗಳ ಅಗತ್ಯವಿದೆ.

ಇತ್ತ ಬಿಜೆಪಿ-ಜೆಡಿಎಸ್ ಮೈತ್ರಿ ಕೂಟವು ತಮ ಸಂಖ್ಯಾಬಲದೊಂದಿಗೆ 2 ಸ್ಥಾನಗಳನ್ನು ಗೆಲ್ಲಬಹುದಾದರೂ, ಮೂರನೇ ಅಭ್ಯರ್ಥಿಯ ಗೆಲುವಿಗೆ ಕೆಲವು ಮತಗಳ ಕೊರತೆ ಎದು-ರಿಸುತ್ತಿದೆ. ಈ ಚುನಾವಣೆಯಲ್ಲಿ ಪಕ್ಷೇತರ ಶಾಸಕರ ಮತಗಳು ನಿರ್ಣಾಯಕ ಪಾತ್ರ ವಹಿಸುತ್ತಿವೆ. ವಿಧಾನಸಭೆಯಲ್ಲಿನ ಗಣಿತದ ಪ್ರಕಾರ, ಕಾಂಗ್ರೆಸ್ ತನ್ನ ಐದನೇ ಅಭ್ಯರ್ಥಿಯನ್ನು (ವಿನಯ್ ಕಾರ್ತಿಕ್) ಗೆಲ್ಲಿಸಿಕೊಳ್ಳಲು ಪಕ್ಷೇತರ ಶಾಸಕರ ಬೆಂಬಲ ಹಾಗೂ ಬಿಜೆಪಿ ಪಕ್ಷದಿಂದ ಉಚ್ಚಾಟಿ-ತರಾದ ಶಾಸಕರ ನೆರವನ್ನು ಅವಲಂಬಿಸಿದೆ. ಇದೇ ಕಾರಣಕ್ಕೆ ಆಡಳಿತಾರೂಢ ಕಾಂಗ್ರೆಸ್ ಹಾಗೂ ಬಿಜೆಪಿ-ಜೆಡಿಎಸ್ ಮೈತ್ರಿಕೂಟಗಳೆರಡೂ ಪಕ್ಷೇತರರರನ್ನು ತಮತ್ತ ಸೆಳೆಯಲು ತೀವ್ರ ಪ್ರಯತ್ನ ನಡೆಸುತ್ತಿವೆ. ಬಿಜೆಪಿ ಉಚ್ಚಾಟಿ-ತ ಶಾಸಕರು ಮತ್ತು ಸಣ್ಣಪುಟ್ಟ ಪ್ರಾದೇಶಿಕ ಪಕ್ಷಗಳ ಶಾಸಕರು ಈ ಚುನಾವಣೆಯಲ್ಲಿ ಕಿಂಗ್ ಮೇಕರ್‌ಗಳಾಗುವ ಸಾಧ್ಯತೆಯಿದೆ. ಅಡ್ಡ ಮತದಾನದ ಭೀತಿ: ಚುನಾವಣೆ ರಹಸ್ಯ ಮತದಾನ ಪದ್ಧತಿಯಲ್ಲಿ ನಡೆಯುವುದರಿಂದ, ಪಕ್ಷದ ಆಂತರಿಕ ಭಿನ್ನಮತ ಅಥವಾ ಅಡ್ಡ ಮತದಾನದ ಭಯ ಎಲ್ಲಾ ಪಕ್ಷಗಳನ್ನೂ ಕಾಡುತ್ತಿದೆ. ಇದೇ ಕಾರಣಕ್ಕೆ ಶಾಸಕರನ್ನು ಒಗ್ಗೂಡಿಸಿ ಇರಿಸುವ (ರೆಸಾರ್ಟ್ ಅಥವಾ ಕ್ಯಾಂಪ್ ರಾಜಕೀಯದ ಮಾದ-ರಿಯಲ್ಲಿ) ತಂತ್ರಗಳಿಗೆ ಪಕ್ಷಗಳು ಮುಂದಾಗಿವೆ.

## ಸಂಪುಟ ವಿಸ್ತರಣೆ :ಹೈಕಮಾಂಡ್ ಜೊತೆ ಸಿಎಂ-ಡಿಸಿಎಂ ಚರ್ಚೆ

ಅ.ಶ. ಸುದ್ದಿ ಬೆಂಗಳೂರು

ಬೆಂಗಳೂರು: ದೆಹಲಿ ಪ್ರವಾಸದಲ್ಲಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಅವರು ಸಚಿವ ಸಂಪುಟ ವಿಸ್ತರಣೆ ಬಗ್ಗೆ ಹೈಕಮಾಂಡ್ ನಾಯಕರ ನಡುವೆ ಔಪಚಾರಿಕ ಚರ್ಚೆ ನಡೆಸಲಿದ್ದಾರೆ. ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಯವರು ಎರಡು ದಿನಗಳಿಂದಲೂ ದೆಹಲಿಯಲ್ಲೇ ಇದ್ದಾರೆ. ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಕೂಡ ಪಕ್ಷದ ಉನ್ನತ ಮಟ್ಟದ ಸಭೆಯಲ್ಲಿ ಭಾಗವಹಿಸಲು ದೆಹಲಿಗೆ ತೆರಳಿದ್ದಾರೆ.ಸಂಜೆ ಮುಖ್ಯಮಂತ್ರಿಯವರು ಹೈಕಮಾಂಡ್ ನಾಯಕರ ಜೊತೆ ಮತ್ತೊಂದು ಸುತ್ತಿನ ಚರ್ಚೆ ನಡೆಸುವ ಸಾಧ್ಯತೆ ಇದೆ.



ನಿನ್ನೆ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಮತ್ತು ಪ್ರಿಯಾಂಕ ಗಾಂಧಿ ಅವರ ಜೊತೆ ಡಿ.ಕೆ.ಶಿವಕುಮಾರ್ ಮಹತ್ವದ ಮಾತುಕತೆ ನಡೆಸಿದರು. ಇಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ ಮತ್ತಿತರರನ್ನು ಭೇಟಿ ಮಾಡಿ ಮಾತುಕತೆ ನಡೆಸಲಿದ್ದಾರೆ. ಶಾಸಕರ ಲಾಬಿ: ಈ ನಡುವೆ ದೆಹಲಿಯಲ್ಲಿ ರಾಜ್ಯದ ಮೂವರು ನಾಯಕರು ಬೀಡು ಬಿಟ್ಟಿದ್ದು, ಅವರ ಮನವೊಲಿಸಲು ರಾಜ್ಯದ ಕಾಂಗ್ರೆಸ್ ನಾಯಕರ ದಂಡೇ ನೆರೆದಿದೆ. ಕೆ.ಷಡಕ್ಷರಿ, ಟಿ.ಬಿ.ಜಯಚಂದ್ರ ಸೇರಿದಂತೆ ಹಲವು ಶಾಸಕರು ದೆಹಲಿಯಲ್ಲೇ ಇದ್ದು, ಸಚಿವ ಸ್ಥಾನಕ್ಕಾಗಿ ಒತ್ತಡ ಹೇರುತ್ತಿದ್ದಾರೆ. ಮಾಜಿ ಸಚಿವ ಕೆ.ಎನ್. ರಾಜಣ್ಣ ಅವರನ್ನು ಮತ್ತೆ ಸಂಪುಟಕ್ಕೆ ಸೇರಿಸಿಕೊಳ್ಳಬೇಕು ಎಂಬ ಒತ್ತಡ ಕೂಡ ಕೇಳಿ ಬರುತ್ತಿದೆ. ಈ ಮೊದಲು ಮತಚೋರಿ ಹಗರಣದ ಹಿನ್ನೆಲೆಯಲ್ಲಿ ರಾಹುಲ್ ಗಾಂಧಿ ಅವರ ಹೇಳಿಕೆಗೆ ವ್ಯತಿರಿಕ್ತವಾಗಿ ಮಾತನಾಡಿ ಸಂಪುಟದಿಂದ ವಜಾಗೊಂಡಿದ್ದ ಕೆ.ಎನ್.ರಾಜಣ್ಣ ಅವರ ಪುತ್ರ ರಾಜೇಂದ್ರ ರಾಜಣ್ಣ ದೆಹಲಿಯಲ್ಲಿ ಬೀಡು ಬಿಟ್ಟಿದ್ದು, ತಮ ಕುಟುಂಬಕ್ಕೆ ಯಾರಿಗಾದರೂ ಸಚಿವ ಸ್ಥಾನ ನೀಡಲೇಬೇಕೆಂದು ಪಟ್ಟು ಹಿಡಿದಿದ್ದಾರೆ. ತುಮಕೂರು ಜಿಲ್ಲೆಯ ತಿಪಟೂರು ಕ್ಷೇತ್ರದ ಶಾಸಕ ಕೆ.ಷಡಕ್ಷರಿ ದೆಹಲಿಯಲ್ಲೇ ಉಳಿದು ವರಿಷ್ಠರನ್ನು ಭೇಟಿ ಮಾಡುವ ಸಂದರ್ಭದಲ್ಲಿ ಅಸ್ವಸ್ಥರಾಗಿದ್ದಾರೆ. ಕೂಡಲೇ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಮೊದಲ ಹಂತದ ಸಂಪುಟ ರಚನೆಯಲ್ಲಿ 14 ಜನರಿಗೆ ಅವಕಾಶ ಕಲ್ಪಿಸಲಾಗಿದೆ. ಇನ್ನೂ ಬಾಕಿಯಿರುವ 20 ಸ್ಥಾನಗಳಿಗೆ ಸಚಿವರನ್ನು ನೇಮಿಸಬೇಕಿದೆ. ಅದೇ ರೀತಿ ಸುಮಾರು 80ಕ್ಕೂ ನಿಗಮ-ಮಂಡಳಿಗಳ ಅಧ್ಯಕ್ಷರ ಅವಧಿ ಮುಕ್ತಾಯವಾಗಿದ್ದು, ಎರಡನೇ ಅವಧಿಗೆ ಅಧ್ಯಕ್ಷರಾಗುವವರು ಯಾರು ಎಂದು ನಿರ್ಧರಿಸಬೇಕಿದೆ. ಈ ಹಿನ್ನೆಲೆಯಲ್ಲಿ ಡಿ.ಕೆ.ಶಿವಕುಮಾರ್, ವರಿಷ್ಠರೊಂದಿಗಿನ ಚರ್ಚೆ ಮಹತ್ವ ಪಡೆದುಕೊಂಡಿದೆ. ಸಚಿವ ಸಂಪುಟ ಆದಷ್ಟು ಶೀಘ್ರ ವಿಸ್ತರಣೆಯಾಗಬೇಕು.

## ನಾಳೆ ಕೊಲ್ಲೂರು ಮೂಕಾಂಬಿಕಾದೇವಸ್ಥಾನಕ್ಕೆ ತಮಿಳುನಾಡು ಸಿಎಂ ವಿಜಯ್ ಭೇಟಿ

ಅ.ಶ. ಸುದ್ದಿ ಬೆಂಗಳೂರು

ಬೆಂಗಳೂರು: ತಮಿಳುನಾಡಿನ ನೂತನ ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರು ನಾಳೆ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಪ್ರಸಿದ್ಧ ಕೊಲ್ಲೂರು ಮೂಕಾಂಬಿಕಾ ಕ್ಷೇತ್ರಕ್ಕೆ ಭೇಟಿ ನೀಡಲಿದ್ದಾರೆ. ಮುಖ್ಯಮಂತ್ರಿಯಾದ ನಂತರ ಅವರ ಮೊದಲ ಅಧಿಕೃತ ಭೇಟಿ ಇದಾಗಿದೆ. ಜೆ. ಜಯಲಲಿತಾ ಅವರ ನಂತರ ಕೊಲ್ಲೂರು ಕ್ಷೇತ್ರಕ್ಕೆ ಭೇಟಿ ನೀಡುತ್ತಿರುವ ತಮಿಳುನಾಡಿನ ಎರಡನೇ ಮುಖ್ಯಮಂತ್ರಿ ಇವರಾಗಿದ್ದಾರೆ.



ಈ ಭೇಟಿಯ ಹಿನ್ನೆಲೆ ದೇವಸ್ಥಾನ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಿಗಿ ಭದ್ರತಾ ವ್ಯವಸ್ಥೆಗಳನ್ನು ಕೈಗೊಳ್ಳಲಾಗಿದೆ. ನಾಳೆ ಮಧ್ಯಾಹ್ನ 12.30ಕ್ಕೆ ವಿಶೇಷ ವಿಮಾನದ ಮೂಲಕ ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ಅಲ್ಲಿಂದ ರಸ್ತೆ ಮಾರ್ಗದ ಮೂಲಕ ಕೊಲ್ಲೂರು ತಲುಪಲಿದ್ದಾರೆ.ದೇವಾಲಯಕ್ಕೆ ಆಗಮನ: ಮಧ್ಯಾಹ್ನ ಸುಮಾರು 3 ಗಂಟೆಗೆ ದೇವಸ್ಥಾನಕ್ಕೆ ತಲುಪಿ, ದೇವಿಯ ದರ್ಶನ ಪಡೆದು ವಿಶೇಷ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ.ಸಿಎಂ ವಿಜಯ್ ಅವರಿಗೆ ಝಡ್ ಪ್ಲಸ್ (+) ಭದ್ರತೆ ಇರುವುದರಿಂದ, ಮಂಗಳೂರು ಮತ್ತು ಉಡುಪಿ ಜಿಲ್ಲಾ ಪೊಲೀಸ್ ಇಲಾಖೆಗಳು ಬಿಗಿ ಬಂದೋಬಸ್ತ್ ಏರ್ಪಡಿಸಿವೆ. ತಮಿಳುನಾಡು ಸಿಐಡಿ ಭದ್ರತಾ ವಿಭಾಗದ ಮನವಿಯ ಮೇರೆಗೆ, ಅವರ ಸಂಚಾರದ ಮಾರ್ಗಗಳಲ್ಲಿ ಸಂಚಾರ ದಟ್ಟಣೆ ನಿಯಂತ್ರಣ ಹಾಗೂ ಹೆಚ್ಚಿನ ನಿಗಾ ವಹಿಸಲು ಸೂಚಿಸಲಾಗಿದೆ. ಜೋಸೆಫ್ ವಿಜಯ್ ಅವರು ಶ್ರೀ ಮೂಕಾಂಬಿಕಾ ದೇವಿಯ ದರ್ಶನ ಪಡೆದು, ವಿಶೇಷ ಪೂಜೆಗಳನ್ನು ಸಲ್ಲಿಸಲಿದ್ದಾರೆ. ದೇವಿಗೆ ಅರ್ಚನೆ, ಅಭಿಷೇಕ ಮತ್ತು ಕುಂಕುಮಾರ್ಚನೆ ನಡೆಸಲಿದ್ದಾರೆ. ಸುಮಾರು ಒಂದು ಗಂಟೆ ಕಾಲ ದೇವಸ್ಥಾನದಲ್ಲಿ ಕಳೆಯುವ ನಿರೀಕ್ಷೆಯಿದೆ. ದೇವಿ ದರ್ಶನ ಮತ್ತು ಪೂಜಾ ಕಾರ್ಯಕ್ರಮಗಳು ಮುಗಿದ ಬಳಿಕ, ಸಿಎಂ ವಿಜಯ್ ಅವರು ಮಂಗಳೂ-ರಿಗೆ ತೆರಳಿ ಅಲ್ಲಿನ ವಿಮಾನ ನಿಲ್ದಾಣದಿಂದ ಚೆನ್ನೈಗೆ ಪ್ರಯಾಣ ಬೆಳೆಸಲಿದ್ದಾರೆ. ಅವರ ಈ ಕ್ಷಣಿಕ ಭೇಟಿಯಿಂದಾಗಿ ದೇವಸ್ಥಾನದ ಆವರಣದಲ್ಲಿ ಹೆಚ್ಚಿನ ಗಣ್ಯರು ಮತ್ತು ಅಭಿಮಾನಿಗಳು ಸೇರುವ ಸಾಧ್ಯತೆಯಿದೆ.

## ಸಾಂಬಾರ್‌ನಲ್ಲಿ ಹಲ್ಲಿ ಪತ್ತೆ ತೀವ್ರವಾಗಿ ಅಸ್ವಸ್ಥಗೊಂಡ ಆರು ವಿದ್ಯಾರ್ಥಿಗಳು

ಅ.ಶ. ಸುದ್ದಿ ಹಾಸನ

**ಹಾಸನ: ಹಲ್ಲಿಬಿದ್ದ ಸಾಂಬಾರ್‌ನಲ್ಲಿ ಊಟ ಸೇವನೆ ಮಾಡಿದ 15 ವಿದ್ಯಾರ್ಥಿನಿಯರು ಅಸ್ವಸ್ಥಗೊಂಡಿರುವ ಘಟನೆ ಹಾಸನ ತಾಲೂಕಿನ, ಸಾರಾಪುರದಲ್ಲಿರುವ ಕೃಷಿ ವಿಜ್ಞಾನ ಕಾಲೇಜಿನಲ್ಲಿ ನಡೆದಿದೆ.**

ಬುಧವಾರ ರಾತ್ರಿ ಊಟ ಮಾಡುವಾಗ ಸಾಂಬಾರ್‌ನಲ್ಲಿ ಹಲ್ಲಿ ಪತ್ತೆಯಾಗಿದೆ. ತೀವ್ರವಾಗಿ ಅಸ್ವಸ್ಥಗೊಂಡ ಆರು ವಿದ್ಯಾರ್ಥಿಗಳಿಗೆ ಹಾಸನದ ಹಿಮ್ಸ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಸಿಲಿಂಡರ್ ಕೊರತೆಯಿಂದ ಹೊರಗೆ ಸೌದೆ ಒಲೆಯಲ್ಲಿ ಅಡುಗೆ ಮಾಡುತ್ತಿರುವುದ-ರಿಂದ ಅಚಾತುರ್ಯ ನಡೆದಿದೆ ಎಂದು ಆರೋಪಿಸಲಾಗಿದೆ. ಸುಮಾರು 400



ವಿದ್ಯಾರ್ಥಿನಿಯರು ಇರುವ ಹಾಸ್ಟಲ್‌ಗೆ ಸಿಲಿಂಡರ್ ಸಿಗದೆ ಸಂಕಷ್ಟ ಎದುರಾಗಿದೆ.

ವಾರಕ್ಕೆ ನಾಲ್ಕರಿಂದ ಆರು ವಾಣಿಜ್ಯ ಸಿಲಿಂಡರ್ ಅವಶ್ಯಕತೆ ಇದ್ದು, ಗ್ಯಾಸ್ ಏಜೆನ್ಸಿ ವಾರಕ್ಕೆ ಕೇವಲ ಒಂದು, ಎರಡು ಸಿಲಿಂಡರ್ ನೀಡುತ್ತಿದೆ. ಸಿಲಿಂಡರ್ ಸಿಗದೆ ಅಡುಗೆ ಮನೆಯ ಹೊರಗೆ ಸೌದೆ ಒಲೆಯಲ್ಲಿ ಅಡುಗೆ ಮಾಡಬೇಕಾದ ಅನಿವಾರ್ಯತೆ ಉಂಟಾಗಿದೆ. ಇದೇ ಕಾರಣದಿಂದ ಅಡುಗೆ ಮನೆಯಲ್ಲಿ ಶುಚಿತ್ವ ಇಲ್ಲದೇ ಹಲ್ಲಿ ಬಿದ್ದ ಆಹಾರ ಸೇವನೆ ಮಾಡಿ ವಿದ್ಯಾರ್ಥಿನಿಯರು ಅಸ್ವಸ್ಥರಾಗಿದ್ದಾರೆ. ಹಿಮ್ಸ್‌ಗೆ ಡಿಹೆಚ್‌ಓ ಅನಿಲ್‌ಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## ಎಥೆನಾಲ್ ಮಿಶ್ರಿತ ಪೆಟ್ರೋಲ್‌ಗೆ ಅಬಕಾರಿ ಸುಂಕ ಮನ್ನಾ

ಅ.ಶ. ಸುದ್ದಿ ನವದೆಹಲಿ

**ನವದೆಹಲಿ; ಎಥೆನಾಲ್ ಮಿಶ್ರಿತ ಪೆಟ್ರೋಲ್‌ನ ವಿವಿಧ ಮಾದರಿಗಳ ಮೇಲಿನ ಅಬಕಾರಿ ಸುಂಕವನ್ನು ಕೇಂದ್ರ ಸರ್ಕಾರ ಸಂಪೂರ್ಣವಾಗಿ ಮನ್ನಾ ಮಾಡಿದೆ.ಹಣಕಾಸು ಸಚಿವಾಲಯ ಇಂದು ಬೆಳಿಗ್ಗೆ ಹೊರಡಿಸಿದ ಅಧಿಸೂಚನೆಯಲ್ಲಿ ಈ ಮಾಹಿತಿ ತಿಳಿಸಲಾಗಿದೆ.**

ಅಧಿಸೂಚನೆಯ ಪ್ರಕಾರ, ಕ್ರಮವಾಗಿ ಶೇ.22, ಶೇ.25, ಶೇ.27 ಮತ್ತು ಶೇ.30 ಎಥೆನಾಲ್ ಪೆಟ್ರೋಲ್ ಮೇಲಿನ ಅಬಕಾರಿ ಸುಂಕವನ್ನು ಶೂನ್ಯ (ನಿಲ್) ಎಂದು ಘೋಷಿಸಲಾಗಿದೆ. ಗ್ರಾಹಕರು ಹೆಚ್ಚು ಪ್ರಮಾಣದಲ್ಲಿ ಎಥೆನಾಲ್ ಮಿಶ್ರಿತ ಪೆಟ್ರೋಲ್ ಬಳಕೆಗೆ ಮುಂದಾಗುವಂತೆ




ಉತ್ತೇಜಿಸುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಮೇ ತಿಂಗಳ ದ್ವಿತೀಯಾರ್ಧದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರಗಳು ಪ್ರತಿ ಲೀಟರ್‌ಗೆ ಸುಮಾರು 7.50ರಷ್ಟು ಏರಿಕೆಯಾಗಿದ್ದ ಹಿನ್ನೆಲೆಯಲ್ಲಿ ಈ ಕ್ರಮ ಮಹತ್ವ ಪಡೆದಿದೆ. ಇದಕ್ಕೂ ಮೊದಲು, ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಪರಿಣಾಮ ಜಾಗತಿಕ ಕಚ್ಚಾತೈಲ ಬೆಲೆ ಏರಿಕೆಯಿಂದ ದೇಶೀಯ ಗ್ರಾಹಕರಿಗೆ ಆಗುವ ಹೊರೆ ತಗ್ಗಿಸಲು ಕೇಂದ್ರ ಸರ್ಕಾರ ಮಾರ್ಚ್ ತಿಂಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಪ್ರತಿ ಲೀಟರ್‌ಗೆ 10ರೂಕಡಿತಗೊಳಿಸಿತ್ತು. ಇದ-ರಿಂದ ಸರ್ಕಾರವು ವಾರ್ಷಿಕವಾಗಿ 1 ಲಕ್ಷ ಕೋಟಿಗೂ ಅಧಿಕ ಆದಾಯವನ್ನು ತಗ್ಗಿದೆ.

ಎಥೆನಾಲ್ ಮಿಶ್ರಿತ ಇಂಧನ ಬಳಕೆಯನ್ನು ಉತ್ತೇಜಿಸುವ ಮೂಲಕ ಕಚ್ಚಾತೈಲ ಆಮದು ಅವಲಂಬನೆಯನ್ನು ಕಡಿಮೆ ಮಾಡುವುದು, ಪರಿಸರ ಮಾಲಿನ್ಯ ತಗ್ಗಿಸುವುದು ಹಾಗೂ ರೈತರಿಗೆ ಹೆಚ್ಚುವರಿ ಆದಾಯದ ಅವಕಾಶ ಕಲ್ಪಿಸುವುದು ಸರ್ಕಾರದ ಪ್ರಮುಖ ಉದ್ದೇಶವಾಗಿದೆ.

## ಹಕ್ಕು ಪತ್ರ ವಿತರಣೆಯಲ್ಲಿ ಭಾರೀ ಅವ್ಯವಹಾರ : ಆರೋಪ

ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ತಾಲೂಕಿನ ಮರಳಿ ಹೋಬಳಿಯ ಹೊಸ ಅಯೋಧ್ಯೆ ಗ್ರಾಮದಲ್ಲಿ ಹಕ್ಕು ಪತ್ರ ವಿತರಣೆಯಲ್ಲಿ ಭಾರೀ ಅವ್ಯವಹಾರ ನಡೆದಿದೆ ಎಂದು ದಲಿತ ವಿಮೋಚನಾ ಸೇನೆ ಆರೋಪಿಸಿದೆ. ಇದರಲ್ಲಿ ಭಾಗಿಯಾದ ಗ್ರಾಮ ಲೆಕ್ಕಾಧಿಕಾರಿ ಚೈತ್ರಾ ಅವರನ್ನು ಕೂಡಲೇ ಸೇವೆಯಿಂದ ಅಮಾನತುಗೊಳಿಸಬೇಕೆಂದು ಒತ್ತಾಯಿಸಿದೆ.**

ಈ ಕುರಿತು ತಹಶೀಲ್ದಾರರಿಗೆ ಮನವಿ ಸಲ್ಲಿಸಿರುವ ದ.ವಿ.ಸೇ ಪದಾಧಿಕಾ-ರಿಗಳು, ಕಳೆದ 8 ವರ್ಷಗಳಿಂದ ಒಂದೇ ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಲೆಕ್ಕಾಧಿಕಾರಿ ಚೈತ್ರಾ, ತಮ್ಮ ಅಧಿಕಾರವನ್ನು



ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ದೂರಿದ್ದಾರೆ.?ಹಕ್ಕು ಪತ್ರದಲ್ಲಿ ಪಕ್ಷಪಾತ, 2001 ಮತ್ತು 2025ರ ಹಕ್ಕು ಪತ್ರಗಳ ವಿತರಣೆಯಲ್ಲಿ ಹಣ ಪಡೆದವರಿಗೆ ಮಾತ್ರ ಮಣೆ ಹಾಕಲಾಗಿದೆ. ಅರ್ಹರಿಗೆ ಹಕ್ಕು ಪತ್ರ ನೀಡುವಲ್ಲಿ ತಾರತಮ್ಯ ಮಾಡಲಾಗಿದ್ದು, ಹಣ ನೀಡದ ಫಲಾನುಭವಿಗಳ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ.

**ಕರ್ತವ್ಯಲೋಪ:** ಕಳೆದ 8 ವರ್ಷಗಳಿಂದ ಒಂದೇ ಸ್ಥಳದಲ್ಲಿರುವ ಗ್ರಾಮ ಲೆಕ್ಕಾಧಿಕಾರಿ, ರೈತ-ರಿಗೆ ಬೆಳೆ ಹಾನಿ ಪರಿಹಾರ ದೊರಕಿಸುವಲ್ಲಿ ವಿಫಲರಾಗಿದ್ದಾರೆ. ಪಕ್ಕದ ಗ್ರಾಮಗಳಲ್ಲಿ ರೈತರ ಖಾತೆಗೆ ಪರಿಹಾರ ಜಮಾ ಆಗಿದ್ದರೂ, ಹೊಸ ಅಯೋಧ್ಯೆ ಗ್ರಾಮದ ರೈತರಿಗೆ ವಂಚನೆ ಮಾಡಲಾಗುತ್ತಿದೆ. ಸ್ಥಳ ಪರಿಶೀಲನೆ ಅಥವಾ ಪಂಚನಾಮ ನಡೆಸದೆ ರೈತರ ಹಿತಾಸಕ್ತಿಗೆ ಧಕ್ಕೆ ಉಂಟುಮಾಡಿದ್ದಾರೆ ಎಂದು ಸಂಘಟನೆ ಗಂಭೀರ ಆರೋಪ ಮಾಡಿದೆ.

ಮುಂದಿನ 10 ದಿನಗಳ ಒಳಗೆ ಗ್ರಾಮ ಲೆಕ್ಕಾಧಿಕಾರಿ ಚೈತ್ರಾ ಅವರ ವಿರುದ್ಧ ಸೂಕ್ತ ತನಿಖೆ ನಡೆಸಿ, ಅವರನ್ನು ಸೇವೆಯಿಂದ ಅಮಾನತುಗೊಳಿಸದಿದ್ದರೆ, ಗ್ರಾಮಸ್ಥರ ಜೊತೆಗೂಡಿ ತಹಶೀಲ್ದಾರ್ ಕಚೇರಿ ಮುಂದೆ ಉಗ್ರ ಹೋರಾಟ ಮತ್ತು ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ಸಂಘಟನೆ ಎಚ್ಚರಿಸಿದೆ. ಮನವಿ ಸಲ್ಲಿಸುವ ಸಂದರ್ಭದಲ್ಲಿ ದ.ವಿ.ಸೇ ರಾಜ್ಯ ಉಪಾಧ್ಯಕ್ಷ ಎಸ್.ದುರುಗಪ್ಪ, ಜಿಲ್ಲಾಧ್ಯಕ್ಷ ಎಸ್. ರಮೇಶ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹುಲುಗಪ್ಪ ಟಿಪುಡಿ, ಭೀಮೇಶ ವಡ್ರಕಲ್, ನಿಂಗಪ್ಪ, ಮಾರುತಿ ಹಿರೇವಂಕಲಕುಂಟ ಸೇರಿದಂತೆ ಹಲವು ಪದಾಧಿಕಾರಿಗಳು ಉಪಸ್ಥಿತರಿದ್ದರು.

# 36 ಗಂಟೆಯಲ್ಲಿ ಕೊಲೆ ಆರೋಪಿ ಸೆರೆ ; ಕನಕಗಿರಿ ಪೊಲೀಸರ ಕ್ಷಿಪ್ರ ಕಾರ್ಯಾಚರಣೆ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಜಿಲ್ಲೆಯ ಕನಕಗಿರಿ ಪೊಲೀಸ್ ಠಾಣಾ ವ್ಯಾಪ್ತಿಯ ಕನಕಗಿರಿ ಪಟ್ಟಣದಲ್ಲಿ ನಡೆದ ಮಹಿಳೆಯ ಕೊಲೆ ಪ್ರಕರಣವನ್ನು ಕನಕಗಿರಿ ಠಾಣೆ ಪೊಲೀಸರು ಕೇವಲ 36 ಗಂಟೆಯೊಳಗೆ ಭೇದಿಸಿ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಜೂ.08ರಂದು ಸಂಜೆ 7.00 ಗಂಟೆಯಿಂದ ರಾತ್ರಿ 10.15 ಗಂಟೆಯ ಅವಧಿಯಲ್ಲಿ ಕನಕಗಿರಿ ಪಟ್ಟಣದ ಸಂಗನಗೌಡ ಮಾಲಿಪಾಟೀಲ ಅವರಿಗೆ ಸೇರಿದ ನಿರ್ಮಾಣ ಹಂತದ ಮನೆಯೊಂದರ ಕೋಣೆಯಲ್ಲಿ ಸುಮಾರು 43 ವರ್ಷದ ಮಹಿಳೆಯನ್ನು ಕೊಲೆ ಮಾಡಿ, ಬಳಿಕ ಮೃತದೇಹಕ್ಕೆ ಬೆಂಕಿ ಹಚ್ಚಿ ಸಾಕ್ಷ್ಯಾಧಾರಗಳನ್ನು ನಾಶಪಡಿಸಲು ಯತ್ನಿಸಲಾಗಿತ್ತು.**

ಈ ಕುರಿತು ಸಂಗನಗೌಡ ಮಾಲಿಪಾಟೀಲ ನೀಡಿದ ದೂರಿನ ಮೇರೆಗೆ ದಿನಾಂಕ ಜೂನ್ ರಂದು ಕನಕಗಿರಿ ಪೊಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ 91/2026ರ ಅಡಿಯಲ್ಲಿ ಭಾರತೀಯ ನ್ಯಾಯ ಸಂಹಿತೆ (ಃಓಖ)–2023ರ ಕಲಂ 103(1) ಹಾಗೂ 238ರಡಿ ಪ್ರಕರಣ ದಾಖಲಿಸಿ ತನಿಖೆ ಆರಂಭಿಸಲಾಗಿತ್ತು. ಪ್ರಕರಣವು ಗಂಭೀರ ಹಾಗೂ ಕ್ಲಿಷ್ಟಕರ ಸ್ವರೂಪದ್ದಾಗಿದ್ದರಿಂದ ವಿಶೇಷ ಪತ್ತೆ



ತಂಡವನ್ನು ರಚಿಸಿ ತ್ವರಿತ ಹಾಗೂ ವೈಜ್ಞಾನಿಕ ತನಿಖೆ ನಡೆಸಲಾಯಿತು. ತನಿಖೆ ವೇಳೆ ಮೃತ ಮಹಿಳೆಯನ್ನು ಕಾರಟಗಿ ಪಟ್ಟಣದ ಇಂದ್ರಾನಗರ ನಿವಾಸಿ ರತ್ನಮ್ಮ (43) ಎಂದು ಗುರುತಿಸಲಾಯಿತು.

ಪ್ರಕರಣದ ತನಿಖೆಯಲ್ಲಿ ಸಂಶಯಿತನಾಗಿ ಪತ್ತೆಯಾದ ಶ್ಯಾಮೀದಸಾಬ ತಂದೆ ಹುಸೇನಸಾಬ ತಾಳಕೇರಿ (30), ಕೂಲಿ ಕಾರ್ಮಿಕ, ಕಂದಕೂರ ಗ್ರಾಮದ ನಿವಾಸಿ (ಪ್ರಸ್ತುತ ಹುಲಿಹೈದರ) ಈತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಮೃತ ರತ್ನಮ್ಮಳೊಂದಿಗೆ ಅಕ್ರಮ ಸಂಬಂಧ ಹೊಂದಿದ್ದ ಆತ, ಆಕೆ ಇತರರೊಂದಿಗೂ ಸಂಬಂಧ ಹೊಂದಿದ್ದಾಳೆ ಎಂಬ ಸಂಶಯದಿಂದ ಕೊಲೆ ಮಾಡುವ ಉದ್ದೇಶದಿಂದ ಕನಕಗಿರಿ ಪಟ್ಟಣದಲ್ಲಿರುವ ನಿರ್ಮಾಣ ಹಂತದ ಕಟ್ಟಡಕ್ಕೆ ಕರೆತಂದು ಕುತ್ತಿಗೆ ಹಿಸುಕಿ ಕೊಲೆ ಮಾಡಿರುವುದಾಗಿ ಹಾಗೂ ನಂತರ ಸಾಕ್ಷ್ಯಾಧಾರಗಳು ದೊರೆಯದಂತೆ ಮೃತದೇಹಕ್ಕೆ ಬೆಂಕಿ ಹಚ್ಚಿರುವುದಾಗಿ ಒಪ್ಪಿಕೊಂಡಿದ್ದಾನೆ.

ಆರೋಪಿಯಿಂದ ಕೃತ್ಯಕ್ಕೆ ಬಳಸಿದ



ಬೆಂಕಿ ಪೊಟ್ಟಣ ಸೇ–ರಿದಂತೆ ಇತರೆ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಪ್ರಕರಣಕ್ಕೆ ಎಸ್‌ಸಿ/ಎಸ್‌ಟಿ (ದೌರ್ಜನ್ಯ ತಡೆ) ಕಾಯ್ದೆ, 1989ರ ಕಲಂ 3(2)(5) ಅನ್ನು ಸಹ ಸೇರ್ಪಡೆಗೊಳಿಸಲಾಗಿದೆ. ಆರೋಪಿಯ ವಿರುದ್ಧ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಪ್ರಕರಣದ ಭೇದನೆಗಾಗಿ ಕೊಪ್ಪಳ ಜಿಲ್ಲೆಯ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಹೇಮಂತ್ ಕುಮಾರ ಆರ್. ಹಾಗೂ ಗಂಗಾವತಿ ಉಪ ವಿಭಾಗದ ಡಿವೈಎಸ್‌ಪಿಯಾದ ಜೆ.ಎಸ್. ನ್ಯಾಮಗೌಡ ಅವರ ಮಾರ್ಗದರ್ಶನದಲ್ಲಿ ಕನಕಗಿರಿ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ವಿ. ನಾರಾಯಣ, ಕಾರಟಗಿ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಸುಧೀರ ಕುಮಾರ ಬೆಂಕಿ, ಪ್ರೊಬೆಷನರಿ ಪಿಎಸ್‌ಐ ಉಮೇಶ್ ಹಾಗೂ ಪೊಲೀಸ್ ಅಧಿಕಾರಿ–ಸಿಬ್ಬಂದಿಯನ್ನು ಒಳಗೊಂಡ ವಿಶೇಷ ಪತ್ತೆ ತಂಡವನ್ನು ರಚಿಸಲಾಗಿತ್ತು.


ಯಾವುದೇ ಸ್ಪಷ್ಟ ಸುಳಿವುಗಳಿಲ್ಲದೆ, ಮೃತ ಮಹಿಳೆಯ ಗುರುತು ಹಾಗೂ ಆರೋಪಿಯ ಮಾಹಿತಿ ಲಭ್ಯವಿಲ್ಲದ ಪರಿಸ್ಥಿತಿಯಲ್ಲಿ ದಾಖಲಾಗಿದ್ದ ಈ ಕೊಲೆ ಪ್ರಕರಣವನ್ನು ಕೇವಲ 36 ಗಂಟೆಗಳೊಳಗೆ ಭೇದಿಸಿ ಆರೋಪಿಯನ್ನು ಬಂಧಿಸಿರುವ ವಿಶೇಷ ಪತ್ತೆ ತಂಡದ ಕಾರ್ಯವನ್ನು ಮೆಚ್ಚಿ ಕೊಪ್ಪಳ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಡಾ.ರಾಮ್ ಎಲ್.ಅರಸಿದ್ಧಿ ಅವರು ತಂಡದ ಎಲ್ಲ ಅಧಿಕಾರಿ ಮತ್ತು ಸಿಬ್ಬಂದಿಗೆ ಅಭಿನಂದನೆ ಹಾಗೂ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

**ಕೊಲೆ ಆರೋಪಿ ಎಂಬಿಬಿ ಆಗಿದ್ದು, ಕುಷ್ಟಗಿ ಮತ್ತು ಬೇವೂರಿನಲ್ಲಿನ ಕಳ್ಳತನ ಪ್ರಕರಣದಲ್ಲಿ ಭಾಗಿಯಾಗಿದ್ದಾನೆ ಮತ್ತು ಆತನಿಗೆ ಈಗಾಗಲೆ ಎರಡು ಮದುವೆಗಳಾಗಿವೆ. ಇದು ಅನೈತಿಕ ಸಂಬಂಧ ಆಗಿದ್ದರಿಂದ ಈ ಕೃತ್ಯ ಎಸಗಿದ್ದಾನೆ. ಈ ಕುರಿತು ವಿಶೇಷ ಪೊಲೀಸ್ ತಂಡವನ್ನು ರಚನೆ ಮಾಡಿ ಆರೋಪಿಯನ್ನು 36 ಗಂಟೆಯಲ್ಲಿ ಸೆರೆ ಹಿಡುದು, ನ್ಯಾಯಾಲಯಕ್ಕೆ ಹಾಜರಪಡಿಸಿ ಹೆಚ್ಚಿನ ವಿಚಾರಣೆಗೆ ಒಳಪಡಿಸಲು ವಶಕ್ಕೆ ಪಡೆದಿದ್ದೇವೆ. ಇತ್ತೀಚಿಗೆ ಸಾಮಾಜಿಕ ಜಾಲ ತಾಣದಲ್ಲಿ ಪರಿಚತರಾಗಿಯೂ ಸಹ ಇಂತಹ ಪ್ರಕರಣಗಳು ನಡೆಯುತ್ತಿವೆ.ಆದರೆ, ಮಹಿಳೆಯರು ಹೆಚ್ಚೆಚ್ಚು ಜಾಗೃತರಾಗಿರಬೇಕು. ಪೊಲೀಸ್ ಇಲಾಖೆಯಿಂದ ಅರಿವು ಸಹ ಮೂಡಿಸಲಾಗುತ್ತದೆ. ಡಾ.ರಾಮ್ ಎಲ್.ಅರಸಿದ್ಧಿ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೊಪ್ಪಳ.**

## ಗಾಣಿಗ ಸಮಾಜದ ಶಾಸಕರಿಗೆ ಸಚಿವ ನೀಡಬೇಕು :ಸಮಾಜ ಮುಖಂಡರ ಒತ್ತಾಯ,

ಅ.ಶ. ಸುದ್ದಿ ಯಲಬುರ್ಗಾ

**ಯಲಬುರ್ಗಾ: ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಗಾಣಿಗ ಸಮಾಜಕ್ಕೆ ಸಮರ್ಪಕ ಪ್ರಾತಿನಿಧ್ಯ ಸಿಕ್ಕಿಲ್ಲ ಎಂದು ಆರೋಪಿಸಿರುವ ಯಲಬುರ್ಗಾ ತಾಲೂಕು ಗಾಣಿಗ ಸಮಾಜ, ಎರಡನೇ ಹಂತದ ಸಚಿವ ಸಂಪುಟ ವಿಸ್ತರಣೆಯಲ್ಲಿ ಸಮಾಜದ ಹಿರಿಯ ನಾಯಕ ಹಾಗೂ ಅಥಣಿ ಶಾಸಕ ಲಕ್ಷ್ಮಣ ಸವದಿ ಅವರಿಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿದರು.**




ಪಟ್ಟಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ತಾಲೂಕು ಗಾಣಿಗ ಸಮಾಜದ ಅಧ್ಯಕ್ಷ ಶರಣಪ್ಪ ರಾವಣಕಿ ಮಾತನಾಡಿ ಕಾಂಗ್ರೆಸ್ ಪಕ್ಷದಲ್ಲಿ ಗಾಣಿಗ ಸಮಾಜದ ಮೂವರು ಶಾಸಕರಿದ್ದು, ಅವರಲ್ಲಿ ಕನಿಷ್ಠ ಇಬ್ಬರಿಗೆ ಸಚಿವ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಮಹಾಂತೇಶ ಗಾಣಿಗೇರ, ಹನಮಂತಪ್ಪ ಚಾರಾರಿ, ಹಿರೇಹನುಮಪ್ಪ ಬೊಮ್ಮನಾಳ, ಆದ–ೀಶ ರೊಟ್ಟಿ, ಪಂಪಾಪತಿ ವಣಗೇರಿ, ನಾಗರಾಜ ನವಲಹಳ್ಳಿ ಸೇರಿದಂತೆ ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ಕೇಂದ್ರದ ಬೆಲೆ ಏರಿಕೆ ವಿರುದ್ಧ ಕಾಂಗ್ರೆಸ್ ಬೃಹತ್ ಪ್ರತಿಭಟನೆ




ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ (ಗ್ಯಾಸ್) ಸಿಲಿಂಡರ್ ಸೇರಿದಂತೆ ಅಗತ್ಯ ವಸ್ತುಗಳ ಬೆಲೆಗಳನ್ನು ನಿರಂತರವಾಗಿ ಹೆಚ್ಚಿಸುತ್ತಿದ್ದು, ಇದರಿಂದ ಸಾಮಾನ್ಯ ಜನರ ಜೀವನ ಸಂಕಷ್ಟಕ್ಕೀಡಾಗಿದೆ ಎಂದು ಆರೋಪಿಸಿ, ಜಿಲ್ಲಾ ಕಾಂಗ್ರೆಸ್ ಸಮಿತಿಯ ನೇತೃತ್ವದಲ್ಲಿ ಗುರುವಾರ ಕೊಪ್ಪಳದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.**

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಮಾಜಿ ಸಚಿವ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಮರೇಗೌಡ ಪಾಟೀಲ ಬಯ್ಯಾಪುರ ಮಾತನಾಡಿ, ಕೇಂದ್ರ ಸರ್ಕಾರದ ಬೆಲೆ ಏರಿಕೆ ನೀತಿಯನ್ನು ತೀವ್ರವಾಗಿ ಖಂಡಿಸಿದರು. ಕೂಡಲೇ ಬೆಲೆ ಏರಿಕೆಯನ್ನು ನಿಯಂತ್ರಿಸಿ, ಅಗತ್ಯ ವಸ್ತುಗಳ ಮೇಲಿನ ತೆರಿಗೆ ಮತ್ತು ಶುಲ್ಕಗಳನ್ನು ಕಡಿಮೆ ಮಾಡಿ ಸಾಮಾನ್ಯ ಜನರಿಗೆ ನೆರವಾಗುವಂತೆ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡರು, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವ ವೇಳೆ ನೀಡಿದ್ದ ಭರವಸೆಗಳನ್ನು ಈಡೇರಿಸುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿದರು. ಬೆಲೆ ಇಳಿಕೆ, ರೂಪಾಯಿ ಮೌಲ್ಯ ವೃದ್ಧಿ, ಉದ್ಯೋಗ ಸೃಷ್ಟಿ ಹಾಗೂ ಕಪ್ಪು ಹಣ ವಾಪಸ್ ತರುವ ಭರವಸೆ ನೀಡಿದ್ದ ಸರ್ಕಾರ ಇಂದು ಜನರ ಮೇಲೆಯೇ ಹೆಚ್ಚುವರಿ ಹೊರೆ ಹಾಕುತ್ತಿದೆ ಎಂದು ಟೀಕಿಸಿದರು. ಬೃಹತ್ ಪ್ರತಿಭಟನಾ ಮೆರವಣಿಗೆಯಲ್ಲಿ ಶಾಸಕ ಕೆ. ರಾಘವೇಂದ್ರ ಹಿಟ್ನಾಳ, ಸಂಸದ ಕೆ. ರಾಜಶೇಖರ ಹಿಟ್ನಾಳ, ಮಾಜಿ ಶಾಸಕ ಕೆ. ಬಸವರಾಜ ಹಿಟ್ನಾಳ, ತುಂಗಭದ್ರ ಕಾಡಾ ಅಧ್ಯಕ್ಷ ಹಸನ್ ಸಾಬ್ ದೂಟಿಹಾಳ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಎಸ್.ಬಿ. ನಾಗರಹಳ್ಳಿ, ನಗರಸಭೆ ಮಾಜಿ ಅಧ್ಯಕ್ಷ ಅಮ್ಜದ್ ಪಟೇಲ್, ಗ್ಯಾರಂಟಿ ಸಮಿತಿ ಅಧ್ಯಕ್ಷ ಶ್ರೀನಿವಾಸ ರೆಡ್ಡಿ, ಜಿಲ್ಲಾ ವಕ್ತಾರ ಕೃಷ್ಣ ಇಟ್ಟಂಗಿ,

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಗೂಳಪ್ಪ ಹಲಗೇರಿ, ಗಾಳೆಪ್ಪ ಪೂಜಾರ್, ಶ್ರೀನಿವಾಸ ಗುಪ್ತ, ಮಂಜುನಾಥ ಗೊಂಡವಾಳ, ಗಂಗಮ್ಮ ಸೌಮ್ಯ ಕಂದಗಲ್, ಮಲ್ಲಿಕಾರ್ಜುನ, ಸುರೇಶ್ ದಾಸರೆಡ್ಡಿ, ಲಿಂಗೇಶ್ ಕಲ್ಗುಡಿ, ಗವಿಸಿದ್ದಪ್ಪ ಕರಡಿ, ಗವಿಸಿದ್ದನಗೌಡ ಪಾಟೀಲ, ಶೈಲಜಾ ಹಿರೇಮಠ್, ಜ್ಯೋತಿ ಗೊಂಡವಾಳ, ರೇಷ್ಮಾ ಖಾಜಾವಲಿ, ಸಾವಿತ್ರಿ ಮುಜುಂದಾರ್, ಚಾಂದ್ ಪಾಷಾ ಕಿಲ್ಲೇದಾರ್, ಹುಸೇನ್ ಪೀರ ಮುಜಾವರ್, ಮಾನ್ವಿ ಪಾಷಾ, ಅಜ್ಜಪ್ಪಗೌಡ, ಯುವ ಕಾಂಗ್ರೆಸ್ ನಾಯಕ ಆಸಿಫ್ ಹನಗಿ, ಅಕ್ಬರ್ ಪೊಲೀಸ್ ಮನಿ, ರೇಣುಕಾ, ಪರಶುರಾಮ ಕೆರೆಹಳ್ಳಿ, ಮಲ್ಲು ಪೂಜಾರ್, ಹಾಜಿ ಹುಸೇನಿ, ಅಕ್ಬರ್ ಪಾಷಾ ಪಲ್ಟನ್, ಅಜೀಮುದ್ದೀನ್ ಅತ್ತಾರ್ ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಮಹಿಳೆಯರು ಸೇರಿದಂತೆ ಕಾರ್ಯಕರ್ತರು ಭಾಗವಹಿಸಿದ್ದರು.

## ಇರಾನ್–ಅಮೆರಿಕ ಯುದ್ಧ :ಮತ್ತೆ ಹಾರ್ಮುಜ್ ಜಲಸಂಧಿ ಬಂದ್

ಅ.ಶ. ಸುದ್ದಿ ಟೆಹ್ರಾನ್

**ಟೆಹ್ರಾನ್: ಇರಾನ್, ಅಮೆರಿಕ ಮತ್ತು ಇಸ್ರೇಲ್ ದೇಶಗಳ ನಡುವೆ ಮತ್ತೆ ಘರ್ಷಣೆ ಉಲ್ಬಣಗೊಂಡಿದೆ. ಈ ಬೆಳವಣಿಗೆ ಬೆನ್ನಲ್ಲೇ ಹಾರ್ಮುಜ್ ಜಲಸಂಧಿಯನ್ನು ಇರಾನ್ ಮತ್ತೆ ಬಂದ್ ಮಾಡಿದೆ.ಹಾರ್ಮುಜ್ ಜಲಸಂಧಿಯನ್ನು ಸಂಪೂರ್ಣವಾಗಿ ಮುಚ್ಚಿರುವುದಾಗಿ ಇರಾನ್ ಘೋಷಿಸಿದ್ದು, ಈ ಜಲಸಂಧಿಯನ್ನು ದಾಟಲು ಪ್ರಯತ್ನಿಸುವ ಯಾವುದೇ ಹಡಗಿನ ಮೇಲೆ ದಾಳಿ ಮಾಡಲಾಗುವುದು ಎಂದು ಎಚ್ಚರಿಸಿದೆ.**




ಭಾರತ ಸೇರಿದಂತೆ ಎಲ್ಲ ದೇಶಗಳಿಗೂ ಐಆರ್‌ಜಿಸಿ ಈ ಎಚ್ಚರಿಕೆ ಸಂದೇಶ ರವಾನಿಸಿದೆ. ಹಾರ್ಮುಜ್ ಮೇಲಿನ ನಿರ್ಬಂಧದಿಂದ ಕಚ್ಚಾತೈಲ ಮತ್ತು ನೈಸರ್ಗಿಕ ಅನಿಲ ಪೂರೈಕೆಯಲ್ಲಿ ವ್ಯತ್ಯಯವಾಗುವ ಸಾಧ್ಯತೆಗಳಿವೆ. ದೇಶದ ಉನ್ನತ ಜಂಟಿ ಮಿಲಿಟರಿ ಕಮಾಂಡ್, ವಾಣಿಜ್ಯ ಹಡಗುಗಳು ಮತ್ತು ತೈಲ ಟ್ಯಾಂಕರ್‌ಗಳು ಸೇರಿದಂತೆ ಎಲ್ಲಾ ಸಂಚಾರಕ್ಕೂ ಹಾರ್ಮುಜ್ ಜಲಸಂಧಿಯನ್ನು ಸ್ಥಗಿತಗೊಳಿಸಲು ಆದೇಶಿಸಿದೆ. ಬುಧವಾರ ಇರಾನ್ ವಿರುದ್ಧ ಅಮೆರಿಕ ಮತ್ತೊಂದು ಸರಣಿ ಮಿಲಿಟರಿ ಕಾರ್ಯಾಚರಣೆಗಳನ್ನು ಪ್ರಾರಂಭಿಸಿದ ನಂತರ ಈ ಬೆಳವಣಿಗೆ ನಡೆದಿದೆ. ಇದು ಮೂರು ತಿಂಗಳಿಗೂ ಹೆಚ್ಚು ಕಾಲ ಮುಂದುವರಿದಿರುವ ಸಂಘರ್ಷವನ್ನು ಮತ್ತಷ್ಟು ಹೆಚ್ಚಿಸಿದೆ.

# ರಸಗೊಬ್ಬರಕ್ಕಾಗಿ ರೈತರ ಪರದಾಟ : ಸಮರ್ಪಕ ವಿತರಣೆಗೆ ಆಗ್ರಹ

ಅ.ಶ. ಸುದ್ದಿ ಕುಷ್ಟಗಿ

**ಕುಷ್ಟಗಿ: ತಾಲೂಕಿನಲ್ಲಿ ಕೆಲವು ಭಾಗದಲ್ಲಿ ಉತ್ತಮ ಮಳೆ ಸುರಿದಿದ್ದು, ರೈತರ ಮುಖದಲ್ಲಿ ಮಂದಾಹಾಸ ಮೂಡಿದೆ. ಕೃಷಿ ಚಟುವಟಿಕೆ ಪ್ರಾರಂಭಿಸಲು ರೈತರು ಯೂರಿಯಾ ಗೊಬ್ಬರಕ್ಕೆ ಪಡೆಯಲು ಬಿರು ಬಿಸಿಲಿನಲ್ಲಿ ಸರಿತಿ ಸಾಲಿನಲ್ಲಿ ನಿಂತು ಹೈರಾಣಾಗುತ್ತಿರುವದು ಕಂಡುಬಂತು.**

ಗಂಟೆಗಟ್ಟಲೇ ಸರತಿಯಲ್ಲಿ ನಿಂತುಕೊಂಡರೂ ಸಹ ರಸ ಗೊಬ್ಬರ ಸಿಗದೆ ಪರದಾಡುವಂತ ಸ್ಥಿತಿ ನಿರ್ಮಾಣವಾಗಿದೆ. ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಮುಂಗಾರು ಹಂಗಾಮಿಗೆ ಬಿತ್ತನೆ ಕೃಷಿ ಚಟುವಟಿಕೆಗಳು ಬರದಿಂದ ಸಾಗುತ್ತಿದ್ದು, ಮಳೆಯ ನಿರೀಕ್ಷೆಯಲ್ಲಿರುವ ರೈತ–ರಿಗೆ ಮಳೆ ಸುರಿದು ಸಂತೋಷ ಸಂಭ್ರಮ ಮನೆ ಮಾಡಿದೆ. ಮತ್ತೊಂದಡೆ ಗೊಬ್ಬರದ ಕೊರತೆಯಿಂದ ಸಂಕಟಷ್ಟ ಎದುರಾಗಿದೆ.

ರಾಜ್ಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ನಿಗದಿತ ಅವಧಿ ಒಳಗೆ ರೈತರ ನಿರೀಕ್ಷೆಗೆ ಮೀರಿ ಬೀಜ, ಗೊಬ್ಬರಗಳನ್ನು ಸಂಗ್ರಹಿಸಿ ಇಡಬೇಕಾಗಿತ್ತು. ಆದರೆ, ಪ್ರಸ್ತುತ ಸರ್ಕಾರ ರಾಜ್ಯದಲ್ಲಿ ಗೊಬ್ಬರ ಸಮಸ್ಯೆ ಎದು–ರಿಸುತ್ತಿರುವದರಿಂದ ಅತಿ ಹೆಚ್ಚು ಯೂರಿಯಾ ಗೊಬ್ಬರದ ಮೇಲೆ ಅವಲಂಬಿತವಾಗಿರುವ ರೈತಾಪಿ ವರ್ಗದವರಿಗೆ ನಿರೀಕ್ಷೆಗೆ ಗೊಬ್ಬರ ಸಿಗದೆ ಪರದಾಡುವ ಪರಿಸ್ಥಿತಿ ಕಾಣುವಂತಾಗಿದೆ.

ತಾಲೂಕಿನಲ್ಲಿ ಮೂರ್ನಾಲ್ಕು ದಿನಗಳಿಂದ ಗ್ರಾಮೀಣ ಭಾಗದ ರೈತರು ಬೆಳಗಿನ




ಜಾವ 6 ಗಂಟೆಗೆ ತೆರಳಿ ಗೊಬ್ಬರ ಮಾರಾಟ ಮಾಡುವ ಮಳಿಗೆಗಳ ಮುಂದೆ ತಮ್ಮ ಆಧಾರ ಕಾರ್ಡ್, ಪಹಣಿ ಇನ್ನಿತರ ದಾಖಲಾತಿಗಳನ್ನು ತೆಗೆದುಕೊಂಡು ಸರಥಿ ಸಾಲಿನಲ್ಲಿ ನಿಂತಿ ಹೆಣಗಾಡುತ್ತಿರುವದು ಕಂಡಬಂತು. ಸರ್ಕಾರಗಳು ಮುಂಜಾಗ್ರತ ಕ್ರಮವಹಿಸಿ ಗೊಬ್ಬರಗಳನ್ನು ಸಂಗ್ರಹಿಸಿಕೊಳ್ಳಲು ವ್ಯವಸ್ತೆಯನ್ನು ಮಾಡಿಕೊಳ್ಳಬೇಕಿತ್ತು. ಯಾವುದೇ ಪೂರ್ವ ಯೋಜನೆ ಇಲ್ಲದೇ ಅಧಿಕಾರಿಗಳು ತರಾತುರಿಯಲ್ಲಿ ಬೀಜ ಗೊಬ್ಬರಗಳನ್ನು ವಿತರಿಸುತ್ತಿರುವದನ್ನು ರೈತರ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಈ ಗೊಬ್ಬರ ಸಮಸ್ಯೆಗಳಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲ ಎಂಬ ಕೂಗು ರೈತಾಪಿ ವರ್ಗದಲ್ಲಿ ಕೇಳಿ ಬರುತ್ತಿದೆ.

ಸರ್ಕಾರಗಳ ನಿರ್ಲಕ್ಷ್ಯ ಧೋರಣೆಯನ್ನು ಅನುಸರಿಸುತ್ತಿದೆ ಎಂದು ಈ ಭಾಗದ ಅನೇಕ ರೈತರು ಆರೋಪಿಸಿದರು. ಅಧಿಕಾರಿಗಳ ಎಡವಟ್ಟಿನಿಂದ ಮಾರಾಟಗಾರರ ಮಳಿಗೆ ಮುಂದೆ ನೂಕುನುಗ್ಗಲು ಮುಗಿ ಬೀಳಲು ಕಾರಣವಾಗಿದೆ. ಇದಕ್ಕೆ ಸಂಬಂಧಿಸಿದ ಅಧಿಕಾರಿ ವರ್ಗದವರು ಶೀರ್ಘವಾಗಿ ಎಚ್ಚೆತ್ತುಕೊಂಡು ರಸಗೊಬ್ಬರ ಸಮಸ್ಯೆಗಳಿಗೆ ಸ್ಪಂದಿಸಿ, ರೈತ–ರಿಗೆ ಸಮರ್ಪಕ ಬೀಜ ಮತ್ತು ಗೊಬ್ಬರ ವಿತ–ರಿಸಬೇಕು ಎಂದು ರೈತರು ಆಗ್ರಹಿಸಿದ್ದಾರೆ.

# ನಿಧನ ವಾರ್ತೆ



ಕುಕುನೂರು ಪಟ್ಟಣದ ಹಿರಿಯರು ಶ್ರೀ. ರಾಮಚಂದ್ರರಾವ್ ಗುರುರಾವ್ ದೇಸಾಯಿ ವಕೀಲರು, ವಯಸ್ಸು : 93 ಸಾ॥ಕುಕನೂರು ಇವರು ಜೂನ್ 11 ಗುರುವಾರದಂದು ಸಂಜೆ 5.30 ಘಂಟೆಗೆ ವಯೋಸಹಜ ಖಾಯಿಲೆಯಿಂದ ನಿಧಾನರಾಗಿರುತ್ತಾರೆ. ಇವರ ಅಂತ್ಯ ಸಂಸ್ಕಾರವನ್ನು ಕುಕನೂ–ರಿನ ಬ್ರಾಹ್ಮಣ ಸಮಾಜದ ಮುಕ್ತಿಧಾಮದಲ್ಲಿ ನಾಳೆ ಶುಕ್ರವಾರ ಮುಂಜಾನೆ 11:30 ಮಾಡಲಾಗುವದು.

# 2028ರಲ್ಲೂ ಡಿಕೆಶಿ ಸಿಎಂ ಆದರೆ ತಪ್ಪಿಲ್ಲ :ಸತೀಶ್ ಜಾರಕಿಹೊಳಿ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಮುಂದಿನ ವಿಧಾನಸಭೆ ಚುನಾವಣೆ ನಡೆದು ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ, ಡಿ. ಕೆ.ಶಿವಕುಮಾರ್ ಅವರೇ ಮುಖ್ಯಮಂತ್ರಿಯಾಗಿ ಮುಂದುವರೆಯುವುದರಲ್ಲಿ ತಪ್ಪಿಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ.**

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಲಸ ಮಾಡಿದವರಿಗೆ ಕೂಲಿ ಸಿಗಬೇಕು ಎಂಬುದಕ್ಕೆ ನನ್ನ ಸಹಮತ ಇದೆ. 2028ರ ವಿಧಾನಸಭೆ ಚುನಾವಣೆಗೆ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ತಯಾರಿ ನಡೆಸುವುದಾಗಿ ನಾವೆಲ್ಲರೂ ಈಗಾಗಲೇ ಹೇಳಿದ್ದೇವೆ ಎಂದರು.ಕೆಪಿಸಿಸಿ ಅಧ್ಯಕ್ಷ ಸ್ಥಾನ ಸಿಗದೇ ಇರುವುದಕ್ಕೆ ತಮಗೆ ಯಾವುದೇ



ಬೇಸರವಿಲ್ಲ. ಹರಿಪ್ರಸಾದ್ ಅವರಿಗೆ ಈಗಾಗಲೇ ಹೈಕಮಾಂಡ್ ಜವಾಬ್ದಾರಿ ನೀಡಿದೆ. ಅವರಿಗೆ ಸುದೀರ್ಘ ಪಕ್ಷ ಸಂಘಟನೆಯ ಅನುಭವ ಇದೆ. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಪಕ್ಷವನ್ನು ಮರಳಿ ಅಧಿಕಾರಕ್ಕೆ ತರುವುದಾಗಿ ಹೇಳುತ್ತಿದ್ದಾರೆ, ಸಂತೋಷ. ಇದಕ್ಕೆ ನನ್ನ ಬೆಂಬಲವಿದೆ ಎಂದಿದ್ದಾರೆ.

ಮುಂದಿನ ಚುನಾವಣೆಯಲ್ಲೇ ಮುಖ್ಯಮಂತ್ರಿಯಾಗಬೇಕೆಂಬ ಆತುರತೆ ತಮಗಿಲ್ಲ, ಇನ್ನೂ ವಯಸ್ಸು ಇದೆ. ಹೈಕಮಾಂಡ್ ಡಿ.ಕೆ.ಶಿವಕುಮಾರ್ ಅವರಿಗೆ ಅವಕಾಶ ನೀಡಿದೆ. ಅವರು ಯಶಸ್ವಿಯಾಗಲಿ ಎಂದು ಹೇಳಿದರು. ಹೊಸದಾಗಿ ಇಲಾಖೆಗಳು ಖಾತೆ ನಿರ್ವಹಣೆ ಮಾಡುವವರು ಟೇಕಾಫ್ ಆಗಲು 6 ತಿಂಗಳ ಸಮಯಬೇಕಿದೆ. ಗೃಹಲಕ್ಷ್ಮಿ ಯೋಜನೆಯಲ್ಲಿ ದುರುಪಯೋಗಕ್ಕೆ ಕಡಿವಾಣ ಹಾಕಲು ಕ್ರಮ ಕೈಗೊಳ್ಳಲಾಗುತ್ತಿದೆ. 3 ಲಕ್ಷ ರೂ. ಕೊಟ್ಟು ವಿಮಾನದಲ್ಲಿ ಪ್ರಯಾಣಿಸುವವರಿಗೆ ಗೃಹಲಕ್ಷ್ಮಿ ಸೌಲಭ್ಯ ಬೇಕಿಲ್ಲ, ಜಿಎಸ್‌ಟಿ ಮತ್ತು ಆದಾಯ ತೆರಿಗೆ ಪಾವತಿಸುವವ–ರಿಗೂ ಸೌಲಭ್ಯ ದೊರೆಯುತ್ತಿದ್ದರೆ ಅದನ್ನು ಪರಿಷ್ಕರಣೆ ಮಾಡುವುದು ಅನಿವಾರ್ಯ ಎಂದರು.

ಮೊದಲು ಪಕ್ಷ ಅಧಿಕಾರಕ್ಕೆ ಬರಬೇಕು. ನಂತರ ಮುಖ್ಯಮಂತ್ರಿ ಆಯ್ಕೆಯ ಬಗ್ಗೆ ಚರ್ಚೆಯಾಗಲಿ ಎಂದು ಹೇಳಿದರು. ಖಾತೆ ಹಂಚಿಕೆ ಕುರಿತಂತೆ ರಾಮಲಿಂಗಾರೆಡ್ಡಿ ಅವರಿಗಿದ್ದ ಅಸಮಾಧಾನವನ್ನು ಈಗಾಗಲೇ ಬಗೆಹರಿಸಲಾಗಿದೆ. ಅದೇ ರೀತಿ ಸಚಿವ ಕೃಷ್ಣಭೈರೇಗೌಡ ಅವರಲ್ಲೂ ಅಸಮಾಧಾನಗಳಿದ್ದರೆ, ಪಕ್ಷ ಮತ್ತು ಸರ್ಕಾರದ ಮುಖಂಡರು ಬಗೆಹರಿಸುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ತಮಗೆ ಕ್ರೀಡಾ ಇಲಾಖೆಯ ಮೇಲೆ ಹೆಚ್ಚಿನ ಆಸಕ್ತಿಯಿತ್ತು. ಧರ್ಮಸಿಂಗ್ ಸಂಪುಟದಲ್ಲಿ ಸಚಿವನಾಗಿದ್ದಾಗ ಕ್ರೀಡಾ ಇಲಾಖೆ ಖಾತೆ ಒಂದನ್ನೇ ಕೊಡುವಂತೆ ಮನವಿ ಮಾಡಿದ್ದೆ. ಆದರೆ ಅದು ಸಾಧ್ಯವಾಗಲಿಲ್ಲ. ಈಗಲೂ ತಾವು ಕ್ರೀಡಾ ಇಲಾಖೆಗಾಗಿ ಬೇಡಿಕೆ ಇಟ್ಟಿದ್ದಾಗಿ ತಿಳಿಸಿದರು. ಆದರೆ ಉಪ ಮುಖ್ಯಮಂತ್ರಿ ಪರಮೇಶ್ವರ್ ಅವರಿಗೆ ಕ್ರೀಡಾ ಇಲಾಖೆ ಖಾತೆ ಕೊಟ್ಟಿರುವುದರಿಂದ ಪದೇ ಪದೇ ಅದೇ ವಿಚಾರ ಕೆಣಕುವುದರಲ್ಲಿ ಅರ್ಥವಿಲ್ಲ ಎಂದರು.

# ಲೇಖಕರ ದಿನಚರಿ...

## ಮುದಿಮಲೇಶ್ವರ

ಮರದರಂಧ್ರ ಬಾಗಿಲಲಿ ನೀನಿರುವೆಯಪ್ಪ
ಆಸನಾಗಿರುವೆ ಗರ್ಭಗುಡಿಯೊಳಗಪ್ಪ
ತೇಜುಮಯದಿ ಹೊಳೆಯುತ್ತಿರುವೆಯಪ್ಪ
ನಿನ್ನ ದರ್ಶನ ಸಿಕ್ಕಿದ್ದು ಭಾಗ್ಯವಪ್ಪ

ನೆಲೆಸಿರುವೆ ನೀನು ಬಳ್ಳಾರಿ ತಾಲೂಕಿನಲ್ಲಿ
ಮೂಕ ಎಂಬ ಗ್ರಾಮದ ಬಳಿಯಲ್ಲಿ
ನೆಲೆಸಿರುವೆ ಸುಂದರ ತಾಣದಲ್ಲಿ
ಕಂಗಳಿಸುವೆ ನೂರೊಂದು ಲಿಂಗದ ರೂಪದಲ್ಲಿ

ವಾಹನವಾದ ದ್ವಿನಂದಿಗಳ ಮುಂದೆ ಕುಳಿತ್ತಿರುವೆ
ಬಲಬದಿಯಲ್ಲಿ ವಿಘ್ನಗಳ ಅಧಿಪತಿ ನೆಲೆಸಿರುವೆಎಡಬದಿಯಲ್ಲಿ
ಬೇಡಿದನ್ನು ಕೊಡುವ ಕಾಮಧೇನುವೆ
ನೇರವಾಗಿ ಎಲ್ಲರಿಗೂ ದರ್ಶನ ಕೊಡುತ್ತಿರುವೆ

ತುಸು ಮುಂದೆ  ವೀರಭದ್ರನ ಸನ್ನಿಧಾನವು
ಮೋಕ್ಷಂಬಿಕ ದೇವಿ ಕೊಡುವಳು ಮೋಕ್ಷವುತಂಬ್ರಹಳ್ಳಿಯಲ್ಲಿ
ಮುದಿಮಲೇಶ್ವರನೆಂದು ಪ್ರಸಿದ್ಧವು
ಗಂಗೆಯನ್ನು ಭೂಮಿಗೆ ಕರಿಸಿದ ಭಗೀರಥನು



ಡಾ ವೀರೇಶ್ ಕುಮಾರ್ ಎಸ್

## ಯುದ್ಧನಾದ

ಕರುಣೆಯ ಎದೆ ಸೀಳಿದೆ ಯುದ್ದೋನ್ಮಾದ ಮನವು
ಗರ್ಭದ ಗುಡಿಯಲ್ಲೇ ಅಸುನೀಗಿದೆ ಮಗುವು
ಗುಡಿಯಿಂದ ಗಗನದವರೆಗೂ ಒಂದೇ ಪ್ರಾರ್ಥನೆ
ಏನು ಅರಿಯದ ಜೀವಗಳಿಗೇಕೆ ಯಾತನೆ

ರಕ್ತವನ್ನೇ ಬೇಡುವ ರಾಕೆಟ್ಗಳು
ಬದುಕನ್ನೇ ಬಯಲಿಗಿಟ್ಟಿವೆ ಬಾಂಬ್ಗಳು
ಹಸಿವನ್ನೇ ಅಡಗಿಸಿದೆ ಕಣ್ಣಳಲು
ಹಿಡಿ ಮಾಂಸವಿಲ್ಲ ಮಣ್ಣಲ್ಲಿ ಹೂಳಲು

ಇಟ್ಟ ಹೆಜ್ಜೆಯ ದಾರಿಯಲ್ಲ ರಕ್ತದ ಓಕುಳಿ
ನಾಡ ದೊರೆಗಳು ನೀಡಿದ ಹೋಳಿಯ ಬಳುವಳಿ
ಮೌನವಾಗಿ ಮಲಗಿದೆ ಮಾನವೀಯತೆಯ ಚಳುವಳಿ
ಕೊಡುತಿರುಹರು ಕಾಂಚನಕ್ಕೆ ಕದನದ ಕಚಗುಳಿ

ಹಸಿರನು ಹರಸಿ ಉಸಿರಿಡಿದಿದೆ ನೆಲವು
ಭೇದವ ಅಳಿಸಿ ಬೆನ್ನೇರಿದೆ ಸಾವು
ಮಮತೆಗಾಗಿ ಮಿಡಿಯುತ್ತಿದೆ ಮನುಕುಲವು
ಅರಳಿಸುವವರಾರು ಹಿಂಸೆಯ ನಡುವೆ ಶಾಂತಿಯ ಹೂವು



ಬಸವರಾಜ ಕರುವಿನ ಬಸವನಾಳು

# ಆಧುನಿಕತೆಯ ನೆಪದಲ್ಲಿ ಸಂಪ್ರದಾಯ ನಶಿಸುತ್ತಿದೆ

ಮದುವೆ ಎಂದರೆ  ಎರಡು ಮನಸ್ಸುಗಳು, ಸಂಸ್ಕೃತಿಗಳು ಮತ್ತು ಕುಟುಂಬಗಳ ನಡುವಿನ ಪವಿತ್ರ ಬಂಧ.ಇದು ಕೇವಲ ಇಬ್ಬರು ವ್ಯಕ್ತಿಗಳ ಒಪ್ಪಂದವಲ್ಲ, ಬದಲಿಗೆ ಪರಸ್ಪರ ನಂಬಿಕೆ, ಪ್ರೀತಿ, ಜವಾಬ್ದಾರಿ ಸಹಬಾಳ್ವೆ ಮತ್ತು ಹೊಂದಾಣಿಕೆಯ ಮೂಲಕ ಜೀವನದ ಏಳು-ಬೀಳುಗಳನ್ನು ಜೊತೆಯಾಗಿ ಎದುರಿಸುವ ಸುಂದರವಾದ ಪಯಣ. ಭಾರತೀಯ ಸಂಸ್ಕೃತಿಯಲ್ಲಿ ಮದುವೆ ಸಂಪ್ರದಾಯ ವಿಶೇಷತೆ ಇದೆ.

ಕಾಲ ಬದಲಾದಂತೆ ಮದುವೆ ಸಂಪ್ರದಾಯಗಳು ಬದಲಾಗುತ್ತ ಹೋದವು. ಮನೆ ಮುಂದೆ ಚಪ್ಪರ ಹಾಕಿ ಮದುವೆ ಮಾಡುತಿದ್ದರು.ಬಂಧು ಬಳಗದವರಿಗೆ ಆದ-ರಪೂರ್ವಕವಾಗಿ ಮುತ್ತೈದೆಯರನ್ನು ಕುಂಕುಮ ಹಚ್ಚಿ ಚಪ್ಪರಕ್ಕೆ ಬರಮಾಡಿಕೊಳ್ಳುತ್ತಿದ್ದರು.ಆದರೆ ಇಂದು ಮದುವೆ ಎಂಬುದು ಒಂದು ಪವಿತ್ರ ಸಂಸ್ಕಾರವಾಗಿ ಉಳಿಯುವ ಬದಲು, ಕೇವಲ ಪ್ರತಿಷ್ಠೆ ಪ್ರದರ್ಶನಕ್ಕಾಗಿ ಮಾಡುವ ಒಂದು ಕಾರ್ಯಕ್ರಮದಂತೆ ಬದಲಾಗುತ್ತಿದೆ. ಹಳೆಯ ಕಾಲದ ಮದುವೆಗಳಲ್ಲಿ ಇದ್ದ ಆ ಆತ್ಮೀಯತೆ ಮತ್ತು ದೈವಿಕ ಭಾವ ಇಂದು ಮರೆಯಾಗುತ್ತಿದೆ.

ಇತ್ತೀಚಿನ ದಿನಗಳಲ್ಲಿ ಪ್ರಿ-ವೆಡ್ಡಿಂಗ್ ಫೋಟೋಶೂಟ್, ಅಬ್ಬರದ ಡಿಜೆ ಶಬ್ದ, ಡ್ಯಾನ್ಸ್ ಮಾಡುವುದು ಮತ್ತು ಕೇವಲ ರೀಲ್ಸ್‌ಗಳಿಗಾಗಿ ನಟಿಸುವುದು ಹೆಚ್ಚಾಗುತ್ತಿದೆ. ಮದುವೆಯ ಅಸಲಿ ಗಾಂಭೀರ್ಯ ಮತ್ತು ಮೆರುಗು ಮಾಯವಾಗಿದೆ  ಶಾಸ್ತ್ರಗಳು ಮತ್ತು ಮಂತ್ರಗಳ ಅರ್ಥಕ್ಕೆ ಹೆಚ್ಚಿನ ಮಹತ್ವವಿತ್ತು. ಸಂಪ್ರದಾಯಗಳ ಸೊಬಗು ಸರಳತೆಯ ಸೌಂದರ್ಯ.ಮದುವೆ ಯಾವುದೇ ಅಬ್ಬರದ ಸಂಗೀತವಿಲ್ಲದೆ, ಮಂಗಳ ವಾದ್ಯಗಳ ನಾದಸ್ವರ ನಡುವೆ ನಡೆಯುತ್ತಿದ್ದವು .ಅಂದು ನೆನಪುಗಳನ್ನು ಮನಸ್ಸಿನಲ್ಲಿ ಉಳಿಸಿಕೊಳ್ಳುತ್ತಿದ್ದರು, ಇಂದು ಅದನ್ನು ಕೇವಲ ಕ್ಯಾಮೆರಾ ಮತ್ತು ಸೋಶಿಯಲ್ ಮೀಡಿಯಾಗಾಗಿ ಸೃಷ್ಟಿಸಲಾಗುತ್ತಿದೆ.

ಹಳೆಯ ಕಾಲದ ಮದುವೆ ಸಂಪ್ರದಾಯಬದ್ಧವಾಗಿತ್ತು. ಇಂದಿನ ಮದುವೆ ಆಧುನಿಕ ವೈಭವ ಮುಖ್ಯ ಉದ್ದೇಶ ಮದುವೆ ಒಂದು ಪವಿತ್ರ 'ಸಂಸ್ಕಾರ' ಮತ್ತು ಆಧ್ಯಾತ್ಮಿಕ ಸಂಬಂಧ ಎಂಬ ನಂಬಿಕೆ ಇತ್ತು.  ಅಬ್ಬರದ ಡಿಜೆ, ಐಟಂ ಸಾಂಗ್‌ಗಳು ಮತ್ತು ಕರ್ಕಶ ಶಬ್ದದಿಂದಾಗಿ ಮದುವೆಯ ಗಾಂಭೀರ್ಯವೇ ನಶಿಸುತ್ತಿದೆ. ವಧು-ವರರ ನಡವಳಿಕೆ ವಧು-ವರರಲ್ಲಿ ವಿನಯ, ನಾಚಿಕೆ ಮತ್ತು ಆ ಸಂಪ್ರದಾಯದ ಬಗ್ಗೆ ಭಕ್ತಿ ಇರುತ್ತಿತ್ತು. ಕ್ಯಾಮೆರಾ ಮುಂದೆ ರೀಲ್ಸ್‌ಗಾಗಿ ನಟಿಸುವುದು, ವೇದಿಕೆಯ ಮೇಲೆ ಅಸಹಜವಾಗಿ ನೃತ್ಯ ಮಾಡುವುದು ಹೆಚ್ಚಾಗಿದೆ. ಫೋಟೋಗ್ರಫಿ ಸಹಜವಾದ ಕ್ಷಣಗಳನ್ನು



ಸೆರೆಹಿಡಿಯಲಾಗುತ್ತಿತ್ತು. ಫೋಟೋಗಳು ಜೀವನದ ನೆನಪುಗಳಾಗಿದ್ದವು. ಅಂದು ಪ್ರತಿಯೊಂದು ವಿಧಿಗಳು ಒಂದು ಅರ್ಥವಿರುತ್ತಿತ್ತು. ಊಟೋಪಚಾರ ಬಾಳೆ ಎಲೆಯಲ್ಲಿ ಬಡಿಸುವ ಸಾತ್ವಿಕ ಆಹಾರ ಮತ್ತು ಪ್ರೀತಿಯಿಂದ ಬಡಿಸುವ ಅತಿಥ್ಯವಿತ್ತು. ಮನುಷ್ಯ ಸಂಬಂಧಗಳಿಗಿಂತ ಮೆನು ಕಾರ್ಡ್ ದೊಡ್ಡದಾಗಿರುತ್ತದೆ.ಮೆಹಂದಿ ಸಂಗೀತದಲ್ಲಿ ವಧು ವರ ನೃತ್ಯ ಮಾಡುತ್ತಾರೆ ಅದು ಅವರ ಸಂತೋಷವೇನ್ನಬಹುದು. ಆದರೆ ಮದುವೆಯಲ್ಲಿ ಹಸೆಮಣೆಯಲ್ಲಿ ಕುಳಿತ ಮಧು ಮಗ ಮಧು ಮಗಳನ್ನು ಲಕ್ಷ್ಮಿ ನಾರಾಯಣನ ಸ್ವರೂಪವೆಂದು ಹೇಳಲಾಗುತ್ತದೆ.

ಇತ್ತೀಚಿನ ದಿನಗಳಲ್ಲಿ ಅನೇಕ ಆಧುನಿಕ ಕುಟುಂಬಗಳು ವಧುವನ್ನು ಸಂಭ್ರಮದಿಂದ ಸ್ವಾಗತಿಸಲು "ಗೃಹಪ್ರವೇಶ"ದ ಸಮಯದಲ್ಲೂ ಡಿಜೆ ಅಥವಾ ಹಾಡುಗಳ ಮೂಲಕ ನೃತ್ಯ ಮಾಡಲು ಪ್ರೋತ್ಸಾಹಿಸುತ್ತಾರೆ.ನಮ್ಮ ಸಂಪ್ರದಾಯದ ಪ್ರಕಾರ, ವಧು ಹೊಸ ಮನೆಗೆ ಪ್ರವೇಶಿಸಿದಾಗ "ಲಕ್ಷ್ಮಿ"ಯಂತೆ ಶಾಂತವಾಗಿ ಬರಬೇಕೆಂದು ನಿರೀಕ್ಷಿಸಲಾಗುತ್ತದೆ. ಹಾಗಾಗಿ ಅನೇಕ ಕುಟುಂಬಗಳಲ್ಲಿ ಅಂಗಳದಲ್ಲಿ ನೃತ್ಯ ಮಾಡುವುದು ಅಸಹಜವೆನಿಸಬಹುದು.ಲಕ್ಷ್ಮಿಯನ್ನು ಆದರದಿಂದ ಬರಮಾಡಿಕೊಳ್ಳಿ. ಆಧುನಿಕತೆಯ ನೆಪದಲ್ಲಿ ಅನಾದರದ ತಾಂಡವವಾಗದಿರಲಿ.



ಅಂಜಲಿ ಶ್ರೀನಿವಾಸ
ಖಟವಟೆ ಹುಬ್ಬಳ್ಳಿ

# ಮಕ್ಕಳ ಮಾನಸಿಕ ಸ್ವಾಸ್ಥ್ಯ ನಮ್ಮೆಲ್ಲರ ಹೊಣೆ

ಇಂದಿನ ತಾಂತ್ರಿಕ ಯುಗದಲ್ಲಿ ನಾವು ಸುಸಜ್ಜಿತ ಶಾಲೆಗಳು, ಸ್ಮಾರ್ಟ್ ಕ್ಲಾಸ್ ರೂಮ್‌ಗಳು ಮತ್ತು ಅತ್ಯಾಧುನಿಕ ಪಠ್ಯಕ್ರಮವನ್ನು ಮಕ್ಕಳಿಗೆ ನೀಡುತ್ತಿದ್ದೇವೆ. ಆದರೆ, ಈ ಬಾಹ್ಯ ಬೆಳವಣಿಗೆಯ ನಡುವೆ ಮಗುವಿನ ಅಂತರಂಗದ ಶಾಂತಿ ಮತ್ತು ಮಾನಸಿಕ ಸ್ವಾಸ್ತದ ಸ್ಥಿತಿಗತಿಗಳು ಕಡೆಗಣಿಸಲ್ಪಡುತ್ತಿವೆಯೇ? ಎಂಬ ಪ್ರಶ್ನೆ ಇಂದು ಗಂಭೀರವಾಗಿ ಅವಲೋಕಿಸಿಬೇಕಿದೆ.

ಇತ್ತೀಚಿನ ಅಂಕಿ ಅಂಶಗಳ ಪ್ರಕಾರ, ಶಾಲಾ ಹಂತದ ಮಕ್ಕಳಲ್ಲಿ ಒತ್ತಡ, ಆತಂಕ ಮತ್ತು ಖಿನ್ನತೆಯ ಲಕ್ಷಣಗಳು ನೂರ್ಮಡಿಸುತ್ತಿವೆ. ಇದು ಕೇವಲ ಒಂದು ಕುಟುಂಬದ ಸಮಸ್ಯೆಯಲ್ಲ, ಬದಲಿಗೆ ಆರೋಗ್ಯವಂತ ಸಮಾಜದ ನಿರ್ಮಾಣ-ಕ್ಕೆ ಎದುರಾಗಿರುವ ಬೃಹತ್ ಸವಾಲಾಗಿದೆ. ಮಕ್ಕಳ ಮೇಲೆ ಒತ್ತಡ ಹೇರುವಲ್ಲಿ ಪ್ರಮುಖವಾಗಿ ಮೂರು ಅಂಶಗಳು ಕಾರ್ಯಗತವಾಗುತ್ತಿರುವ ಕಾರಣ ನಾವಿಂದು ಪುನರ್ ಮನನ ಮಾಡುವ ಅನಿವಾರ್ಯತೆಯು ಸೃಷ್ಟಿಸಿದೆ. ಒಂದೆಡೆ ಶೈಕ್ಷಣಿಕ ಸ್ಪರ್ಧೆಯಿಂದ ಅಂಕಗಳೇ ಜೀವನದ ಅಳತೆಗೋಲು ಎಂಬ ತಪ್ಪು ಕಲ್ಪನೆಯಿಂದಾದರೆ ಮತ್ತೊಂದು ಸಾಮಾಜಿಕ ಜಾಲತಾಣಗಳ ಪ್ರಭಾವದಿಂದ ವರ್ಚುವಲ್ ಜಗತ್ತಿನಲ್ಲಿ ಇತರರ ಜೀವನದೊಂದಿಗೆ ತಮ್ಮನ್ನು ಹೋಲಿಸಿಕೊಳ್ಳುವುದರಿಂದ ಹಾಗೆ ಇನ್ನೊಂದು




ಪ್ರಮುಖ ಕಾರಣವೆಂದರೆ ಸಂವಹನದ ಕೊರತೆ.

ಅವಿಭಕ್ತ ಕುಟುಂಬಗಳು ಮಾಯವಾಗಿ, ವಿಭಕ್ತ ಕುಟುಂಬಗಳಲ್ಲಿ ಪೋಷಕರು ಉದ್ಯೋಗದ ಒತ್ತಡದಲ್ಲಿ ಮಕ್ಕಳೊಂದಿಗೆ ಸಮಯ ಕಳೆಯಲು ಸಾಧ್ಯವಾಗದಿರುವುದು. ಮಕ್ಕಳ ಮಾನಸಿಕ ಆರೋಗ್ಯವನ್ನು ಸುಧಾರಿಸಲು ಕೇವಲ ಬೋಧನೆ ಸಾಲದು, ಅಲ್ಲಿ ಪ್ರೀತಿ ಮತ್ತು ವೈಜ್ಞಾನಿಕ ದೃಷ್ಟಿಕೋನದ ಸಮ್ಮಿಲನವಾಗಬೇಕು. ಮಕ್ಕಳಿಗೆ ಕೇವಲ ಗಣಿತ, ವಿಜ್ಞಾನ ಕಲಿಸಿದರೆ ಸಾಲದು, ತಮ್ಮ ಭಾವನೆಗಳನ್ನು (ಕೋಪ, ಬೇಸರ, ಭಯ ಆತಂಕ) ಹಂಚಿಕೊಳ್ಳುವ ಆತ್ಮೀಯತೆ ಮತ್ತು ಅದನ್ನು ಮುಕ್ತವಾಗಿ ವ್ಯಕ್ತಪಡಿಸಲು ಕಲಿಸಬೇಕು. ಸೋಲನ್ನು ಕೂಡ ಗೆಲುವಿನಷ್ಟೇ ಸಹಜವಾಗಿ ಸ್ವೀಕರಿಸುವ ಮನೋಭಾವ ಬೆಳೆಸಲು ಪೋಷಕರು ದಿನದಲ್ಲಿ ಕನಿಷ್ಠ ಅರ್ಧ ಗಂಟೆಯಾದರೂ ಮೊಬೈಲ್ ಪಕ್ಕಕ್ಕಿಟ್ಟು ಮಕ್ಕಳ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡಬೇಕು, ಆ ಸಮಯದಲ್ಲಿ ಯಾವುದೇ ಸಲಹೆ ನೀಡದೆ, ಅವರು ಹೇಳುವುದನ್ನು ಕೇವಲ ಆಲಿಸುವುದ-ರಿಂದಲೇ ಮಗುವಿನ ಅರ್ಧದಷ್ಟು ಆತಂಕ ದೂರವಾಗುತ್ತದೆ.

ಹೋಲಿಕೆಯ ವಿಷವರ್ತುಲದಿಂದ ಮುಕ್ತಿ ಪ್ರತಿ ಮಗುವೂ ವಿಶಿಷ್ಟವಾದ ಪ್ರತಿಭೆಯನ್ನು ಹೊಂದಿರುತ್ತದೆ. "ಪಕ್ಕದ ಮನೆಯ ಮಗು 95% ಪಡೆದಿದೆ, ನೀನೇಕೆ ಪಡೆಯಲಿಲ್ಲ?" ಎಂಬ ಹೋಲಿಕೆ ಮಗುವಿನ ಆತ್ಮವಿಶ್ವಾಸವನ್ನು ಕುಗ್ಗಿಸುತ್ತದೆ. ಸಾಮರ್ಥ್ಯಕ್ಕೆ ತಕ್ಕಂತೆ ಪ್ರೋತ್ಸಾಹ ನೀಡುವುದು ಇಂದಿನ ಅಗತ್ಯ.

ಜೀವನ ಕೌಶಲಗಳ ಅಳವಡಿಕೆ ಕೇವಲ ಪರೀಕ್ಷೆಗಾಗಿ ಓದುವುದಕ್ಕಿಂತ, ಜೀವನದ ಸವಾಲುಗಳನ್ನು ಎದು-ರಿಸುವ 'ಲೈಫ್ ಸ್ಕಿಲ್ಸ್' ಬಗ್ಗೆ ಶಿಕ್ಷಣ ಸಂಸ್ಥೆಗಳು ಒತ್ತು ನೀಡಬೇಕು. ಯೋಗ, ಧ್ಯಾನ ಮತ್ತು ದೈಹಿಕ ಕ್ರೀಡೆಗಳು ಮೆದುಳಿನಲ್ಲಿ ಧನಾತ್ಮಕ ರಾಸಾಯನಿಕಗಳನ್ನು ಬಿಡುಗಡೆ ಮಾಡಿ ಒತ್ತಡವನ್ನು ತಗ್ಗಿಸುತ್ತವೆ. ಇಂದಿನ ಮಕ್ಕಳು ನಾಳೆಯ ಶ್ರೇಷ್ಠ ಪ್ರಜೆಗಳಾಗಲು ಇಂದಿನ ಅವರ ಮನಸ್ಸು ಮೃದುವಾದ ಮಣ್ಣಿನಂತಿದ್ದು, ಅಲ್ಲಿ ನಾವು ಒತ್ತಡದ ಬೀಜ ಬಿತ್ತದೆ, ಆತ್ಮವಿಶ್ವಾಸ ಮತ್ತು ಪ್ರೀತಿಯ ಸಸಿಯನ್ನು ನೆಡಬೇಕಿದೆ. ಪೋಷಕರು, ಶಿಕ್ಷಕರು ಮತ್ತು ಸಮಾಜ ಒಟ್ಟಾಗಿ ಶ್ರಮಿಸಿದರೆ ಮಾತ್ರ ಒಂದು 'ಒತ್ತಡ ಮುಕ್ತ' ತಲೆಮಾರನ್ನು ನಿರ್ಮಿಸಲು ಸಾಧ್ಯ.  ಆದ್ದರಿಂದ ನಾವೆಲ್ಲ ನೆನಪಿಡಬೇಕಾದ ಒಂದು ಪ್ರಮುಖ ಸಂಗತಿ ಎಂದರೆ ಅಂಕದ ಪಟ್ಟಿಗಿಂತ ಮಗುವಿನ ಮುಗುಳ್ನಗೆಯು ಅನನ್ಯ, ಅಮೋಘ, ಅನಂತ.



ಪಾರ್ವತಿ ಎಸ್
ಬಾದಾಮಿ.

# ಹಸಿವಿನ ಸಂತೆ



ಆ ವಿಶಾಲವಾದ ಮೈದಾನದ ತುಂಬೆಲ್ಲಾ ಬೆಳಗಿನ ಜಾವದ ಧೂಳು ಮತ್ತು ಮಂಜು ಮೈ ಎಪ್ಪತ್ತಿತ್ತು. ಸೂರ್ಯ ಇನ್ನೂ ಕಿರಣ ಚೆಲ್ಲಿರಲಿಲ್ಲ, ಅಷ್ಟರಲ್ಲೇ ಸಾವಿರಾರು ಮನುಷ್ಯರ ಉಸಿರಾಟದ ಹಬೆ ಆಕಾಶ ಮುಟ್ಟಿತ್ತು. ಇದು ಬರೀ ಮಣ್ಣಿನ ಮೈದಾನವಲ್ಲ, ನೂರಾರು ಹಳ್ಳಿಗಳ ಶ್ರಮಿಕರ ಹಣೆಬರಹ ಹರಾಜಾಗುವ ಅಖಾಡ. ಇಲ್ಲಿ ಪ್ರತಿ ಶುಕ್ರವಾರ ಬದುಕು ಗಿರವಿಗೆ ಬೀಳುತ್ತದೆ.

ಬಂಡಿ ಸಾಲು, ಟ್ರ್ಯಾಕ್ಟರ್‌ಗಳ ಅಬ್ಬರ, ಕುರಿಗಳ ಬ್ಯಾ.. ಬ್ಯಾ.. ಸದ್ದು ಎಲ್ಲವೂ ಸೇರಿ ಅದೊಂದು ವಿಚಿತ್ರ ರಣರಂಗದಂತೆ ಕಾಣುತ್ತಿತ್ತು. ಮೈದಾನದ ಪ್ರವೇಶ ದ್ವಾರದಲ್ಲೇ ಹಳೆ ಬಟ್ಟೆಗಳನ್ನು ರಾಶಿ ಹಾಕಿಕೊಂಡು ಕೂಗಾಡುತ್ತಿದ್ದ ದೃಶ್ಯವಂತೂ ಕರುಳು ಹಿಂಡುವಂತಿತ್ತು. "ತಗೋರಿಪ್ಪಾ ತಗೋರಿ, ಹತ್ತು ರೂಪಾಯಿಗೆ ಪ್ಯಾಂಟು, ಇಪ್ಪತ್ತಕ್ಕೆ ಶರಟು!" ಎಂದು ಕಿರುಚುತ್ತಿದ್ದ ಹಳೆ ಬಟ್ಟೆ ಮಾರುವವರ ಧ್ವನಿ ಸಂತೆಯ ಗದ್ದಲದಲ್ಲಿ ಮೇಳೈಸಿತ್ತು. ಶ್ರೀಮಂತರು ಬಳಸಿದು ಬಿಟ್ಟ ಆ ಬಣ್ಣಗೆಟ್ಟ ಬಟ್ಟೆಗಳಲ್ಲಿ ತಮ್ಮ ಮಾನ ಮುಚ್ಚಿಕೊಳ್ಳಲು ಬಡವರು ಮುಗಿಬಿದ್ದು ಆಯುತ್ತಿದ್ದರು.

ಹರಿದ ಕಿಶೆಗಳು, ಬಣ್ಣ ಮಾಸಿದ ಕಾಲರ್‌ಗಳು ಅಲ್ಲಿನ ಬಡತನಕ್ಕೆ ಸಾಕ್ಷಿಯಾಗಿದ್ದವು. ಅದರ ಪಕ್ಕದಲ್ಲೇ ರಸ್ತೆ ಬದಿಯ 'ದಂತ ದವಾಖಾನೆ'. ಒಂದು ಹಳೆಯ ಮರದ ಕುರ್ಚಿ, ಕೈಲೊಂದು ಇಕ್ಕಳ ಹಿಡಿದು ಕುಳಿತಿದ್ದ ಆ ನಾಟಿ ವೈದ್ಯ, ನೋವಿನಿಂದ ನರಳುತ್ತಿದ್ದ ಮುದುಕನ ಹಲ್ಲು ಕೀಳಲು ಹರಸಾಹಸ ಪಡುತ್ತಿದ್ದ. "ಸಮಾಧಾನ ಮಾಡ್ಕೋ ಮುತ್ಯಾ, ಈಗ ಬರ್ತದ ನೋಡು ಹೊರಗ," ಎಂದು ವೈದ್ಯ ಹಲ್ಲು ಕಡಿಯುತ್ತಿದ್ದರೆ, ಮುದುಕನ ಕಣ್ಣಲ್ಲಿ ನೀರು ಜಿನುಗುತ್ತಿತ್ತು. ಅಲ್ಲಿ ಅರಿವಳಿಕೆ ಇಲ್ಲ, ಸ್ವಚ್ಛತೆ ಇಲ್ಲ; ಕೇವಲ ಬಡವನ ಹಲ್ಲು ಮತ್ತು ಬದುಕಿನ ಅನಿವಾರ್ಯತೆಯ ನಡುವಿನ ಜಟಾಪಟಿ ಅದು. ಅಲ್ಲೇ ಪಕ್ಕದಲ್ಲಿ ಒತ್ತುವ ಗಾಡಿಯವನ ಗಂಟಲು ಹರಿಯುವ ಹಾಗಿತ್ತು.

"ಬರ್ರಿ ಬರ್ರಿ ಬರ್ರಿ! ಇಪ್ಪತ್ತ ಇಪ್ಪತ್ತ ಇಪ್ಪತ್ತ ರೂ.ಗೆ ಕಿಲೋ ಉಳ್ಳಾಗಡ್ಡಿ! ಮತ್ ಸಿಗಾಂಗಿಲ್ಲ ಬರ್ರಿ! ಅಪ್ಪಟ ನಾಟಿ ಉಳ್ಳಾಗಡ್ಡಿ ಬರ್ರಿ!" ಎಂದು ಆತ ಲಯಬದ್ಧವಾಗಿ ಕೂಗುತ್ತಿದ್ದ. ಅವನ ಗಾಡಿಯ ಸುತ್ತ ಜನವೋ ಜನ. ತರಕಾರಿ ಬುಟ್ಟಿಗಳನ್ನು ತಲೆಯ ಮೇಲೆ ಇಟ್ಟುಕೊಂಡ ಹೆಣ್ಣುಮಕ್ಕಳು ಒಬ್ಬರಿಗೊಬ್ಬರು ತಳ್ಳಾಡುತ್ತಾ, "ನನಗೊಂದು ಐದು ಕಿಲೋ ಹಾಕು," "ನನಗೆ ಮೊದಲು ಕೊಡು," ಎಂದು ಕಿರುಚುತ್ತಿದ್ದರು. ಉಳ್ಳಾಗಡ್ಡಿ ಗಾಡಿಯವನ ಕೈ ಮತ್ತು ತಕ್ಕಡಿ ಗಾಳಿಯಲ್ಲಿ ನೃತ್ಯ ಮಾಡುತ್ತಿದ್ದವು. "ಯಾವಲೇ ನೀನು ನನಗಿಂತ ಮೊದಲು ಕೈ ಹಾಕೋನು? ತಡಿ ಸ್ವಲ್ಪ," ಎಂದು ಗೃಹಿಣಿಯರ ಜಗಳ ಅಲ್ಲಿ ನಿರಂತರವಾಗಿತ್ತು. ಸ್ವಲ್ಪ ಮುಂದೆ ಹೋದರೆ ಬಳ್ಳೊಳ್ಳಿ (ಬೆಳ್ಳುಳ್ಳಿ) ಮಾರುವ ಗಾಡಿಗಳು ಸಾಲುಗಟ್ಟಿ ನಿಂತಿದ್ದವು. ಗಾಳಿಯಲ್ಲಿ ಬೆಳ್ಳುಳ್ಳಿಯ ಆ ಖಾರವಾದ ವಾಸನೆ ಹರಡಿತ್ತು. ಬಳ್ಳೊಳ್ಳಿಯ ಸಿಪ್ಪೆಗಳು ಧೂಳಿನೊಂದಿಗೆ ಹಾರುತ್ತಾ ಜನರ ಕಣ್ಣಿಗೆ ಬಡಿಯುತ್ತಿದ್ದವು.

ಅದರ ಪಕ್ಕದಲ್ಲೇ ಎಣ್ಣೆಯಲ್ಲಿ ಕ-ರಿಯುತ್ತಿದ್ದ ಬಜ್ಜಿಗಳ ಘಮಲು. ಕಾದ ಎಣ್ಣೆಯಲ್ಲಿ ಬಜ್ಜಿಗಳು 'ಬುಸುಬುಸು' ಎಂದು ಬೇಯುತ್ತಿದ್ದರೆ, ಹಸಿದ ಹೊಟ್ಟೆಗಳು ಆ ಬಜ್ಜಿ ಅಂಗಡಿಯ ಮುಂದೆ ಸಾಲುಗಟ್ಟಿದ್ದವು. ಐದು ರೂಪಾಯಿಗೆ ಎರಡು ಬಜ್ಜಿ, ಜೊತೆಗೆ ಸ್ವಲ್ಪ ಖಾರಾ ಹಚ್ಚಿದ ಉಪ್ಪಿನಕಾಯಿ?ಅದೇ ಆ ದಿನದ ಬಹುತೇಕರ ರಾಜಭೋಜನ. ಆ ಬಜ್ಜಿಯ ಘಮಲು ಸಂತೆಯ ಎಲ್ಲ ಕೊಳಕು ವಾಸನೆಯನ್ನು ಮರೆಸಿಬಿಡುವಂತಿತ್ತು. ಕರೆಪ್ಪ ತನ್ನ 'ಕಾಟೇರ' ಟಗರಿನ ಹಗ್ಗವನ್ನು ಗಟ್ಟಿಯಾಗಿ ಹಸ್ತಕ್ಕೆ ಸುತ್ತಿದ್ದ. ಕಾಟೇರ ಕರೆಪ್ಪನಿಗೆ ಬರೀ ಪ್ರಾಣಿಯಾಗಿರಲಿಲ್ಲ, ಅವನ ಒಂಟಿ ಬದುಕಿನ ಜೀವದ ಗೆಳೆಯ. ಅವನ ಬೆವರಿನ ಶಕ್ತಿಯೇ ಆ ಟಗರು. ಕರೆಪ್ಪನ ಕಣ್ಣುಗಳಲ್ಲಿ ಒಂದು ಬಗೆಯ ತಳಮಳವಿತ್ತು. ಅತ್ತ ಹೊಲದಲ್ಲಿ ಕಾಯುತ್ತಿದ್ದ ಸ್ನೇಹಾಳ ಮಾತುಗಳು ಅವನ ಕಿವಿಯಲ್ಲಿ ಗುಂಯ್ ಎನ್ನುತ್ತಿದ್ದವು.

"ಕರಿಯಾ, ಈ ಸಲನೂ ಜಾತ್ರೆಗೆ ಬರಿ ಕೈಲೇ ಬರ್ತೀಯಾ ಏನ? ನಮ್ಮಪ್ಪ ಈ ಮ್ಯಾಲೆ ಬೇರೆ ಕಡೆ ಕಣ್ಣು ಹಾಕಿದ್ದಾನೆ, ಹುಷಾರು!" ಅಂದಿದ್ದಳು. ಸ್ನೇಹಾಳ ಆ ಮಾತುಗಳೇ ಕರೆಪ್ಪನನ್ನು ಈ ಸಂತೆಗೆ ಎಳೆದು ತಂದಿದ್ದವು. ಅಷ್ಟರಲ್ಲಿ ತಂಬಾಕು ಕುಟ್ಟುತ್ತಾ ರಾಯಪ್ಪ ಮತ್ತು ಮುದಕಪ್ಪ ಕರೆಪ್ಪನ ಹತ್ತಿರ ಬಂದರು. "ಏನೋ ಕರೆಪ್ಪಾ, ಮುಖ ಯಾಕೋ ಹಳದಿ ಬಿದ್ದಂಗೆ ಆಗ್ಯೆತಲ್ಲೋ? ಸಂತೆ ಅಂದರ ಹುರುಪು ಇರಬಾರದೇನೋ? ಮಂದಿ ಎಲ್ಲಾ ಬಾಳ ಬಂದಾರ ನೋಡು," ಎಂದು ರಾಯಪ್ಪ ಕೇಳಿದಾಗ ಕರೆಪ್ಪನ ಎದೆ ಭಾರವಾಯಿತು. "ರಾಯಪ್ಪಾ ಸೌಕಾರ್ರೆ, ಈ ಕಾಟೇರನ್ನ ಮಾರೋಕೆ ಜೀವ ಬರ್ತಿಲ್ಲ ನೋಡಿ. ಮನ್ಯಾಗ ಮಗನಿದ್ದ ಹಂಗೆ ಇತ್ತು ಇದು. ಇವತ್ತು ಯಾವನೋ ಕಟುಕನ ಕೈಗೆ ಕೊಡಬೇಕಲ್ಲ ಅನ್ನೋ ನೋವು ತಿನ್ನುತ್ತೈತಿ," ಅಂದ ಕರೆಪ್ಪ. ಮುದಕಪ್ಪ ನಗುತ್ತಾ ಅಂದ, "ಹುಚ್ಚ ಮಗನೇ, ಇದೇನಾರಾ ಮನ್ಯಾಗ ಇಟ್ಕೊಳ್ಳೋ ವಸ್ತುವೇನ? ಇದು ಸಂತೆ, ಇಲ್ಲಿ ವ್ಯಾಪಾರ ಆಗಲೇಬೇಕು.

ನೋಡ ತಮ್ಮಾ, ಈ ಪ್ರಪಂಚದಲ್ಲಿ ಮನುಷ್ಯರಿಗಿಂತ ಮೃಗಗಳೇ ಹೆಚ್ಚು. ಕಣ್ಣು ಮುಚ್ಚಿ ಬಿಡುವುದರೊಳಗೆ ಜೇಬಿಗೆ ಕತ್ತರಿ ಹಾಕ್ತಾರ. ಸ್ನೇಹಾಳ ಓಲೆ ಬೇಕೋ ಇಲ್ಲ ಕಾಟೇರ ಬೇಕೋ ನೀನೇ ತೀರ್ಮಾನ ಮಾಡ್ಕೋ. ಈ ಉಳ್ಳಾಗಡ್ಡಿ ಗಾಡಿ ತರಹ ನಮ್ಮ ಬದುಕೂ ಒಂದೊಂದು ಎಸಳಾಗಿ ಉದುರಿ ಹೋಗಬಾರದು ಅಂದ್ರೆ ಕೈಯಲ್ಲಿ ಕಾಸು ಇರಬೇಕು. ಈ ಕಸದ ರಾಶಿ ನೋಡಿದ್ಯಾ? ಇಲ್ಲಿ ಬಡವನ ಬದುಕು ಕೂಡ ಹೀಗೆಯೇ ಕೆಸರಾಗಿ ಹೋಗ್ತದ, ಎಚ್ಚರ!" ಬಿಸಿಲು ಏರುತ್ತಿದ್ದಂತೆ ದಲ್ಲಾಳಿಗಳಾದ ರಂಗಪ್ಪ ಮತ್ತು ರಾಮಪ್ಪ ಅಲ್ಲಿಗೆ ಪ್ರತ್ಯಕ್ಷರಾದರು. ರಂಗಪ್ಪ ಮುಂದೆ ಬಂದು ಕಾಟೇರನ ಹಲ್ಲುಗಳನ್ನು ಪರೀಕ್ಷಿಸುವ ನಾಟಕವಾಡಿ, "ಏ ತಮ್ಮಾ, ಈ ಕುರಿ ಯಾಕೋ ತಿನ್ನಾಕ ಲಾಯಕ್ಕಿಲ್ಲ ಬಿಡು. ಮುಪ್ಪಾದ ಹಂಗ ಕಾಣತೈತಿ," ಎಂದು ಸುಳ್ಳು ಹೇಳಲು ಶುರು ಮಾಡಿದ. ಕರೆಪ್ಪ ತಟ್ಟನೆ ಎದ್ದು ನಿಂತು ಗುಡುಗಿದ, "ಏನೋ ಸೌಕಾರ್ರೆ, ಮಾತಾಡೋದು ನೋಡಿ! ಇದು ಅಪ್ಪಟ ದೇಶಿ ತಳಿ. ಸುಮ್ನೆ ಮಂಕುಬೂದಿ ಎರಚಬೇಡಿ! ನಿಮಗೇನು ಗೊತ್ತು ಇದರ ಕಿಮ್ಮತ್ತು? ಬಂದಾರ ಹೋಗಾರ ಬಾಳ ಮಂದಿ ಕಂಡೀನಿ ನಿಮ್ಮಂತವರನ್ನ! ತಿನ್ನಾಕ ಲಾಯಕ್ಕಿಲ್ಲ ಅಂದ್ರೆ ನಿಮ್ಮ ಮನೆಯ ದಾ-ರಿಗೆ ಹೋಗಾರಿಗೆ ಕೇಳಿ ಇದರ ಕರಾಮತ್ತು!" ವ್ಯಾಪಾರ ಕುದುರಿಸುವ ಭರದಲ್ಲಿ ದಲ್ಲಾಳಿಗಳು ಕೈಚಳಕ ಮಾಡಿ ಕರೆಪ್ಪನಿಗೆ ಬಣ್ಣದ ಕಾಗದದ ಕಂತೆಯನ್ನು ಕೈಗಿಟ್ಟರು. "ಅಲ್ಲಿ ನೋಡಿ, ಆ ತರಕಾರಿ ಬುಟ್ಟಿ ಇಟ್ಕೊಂಡವಳು ಬಿದ್ದೋದಳು!" ಎಂದು ರಾಮಪ್ಪ ಕಿರುಚಿದಾಗ ಕರೆಪ್ಪನ ಗಮನ ತಪ್ಪಿತು. ಅಷ್ಟರಲ್ಲೇ ಅಸಲಿ ನೋಟುಗಳ ಬದಲಿಗೆ ಬಣ್ಣದ ಕಾಗದದ ಕಂತೆಯನ್ನು ಕೈಗಿಟ್ಟರು. ಕಾಟೇರನನ್ನು ಅವರು ಲಾರಿಗೆ ಎಳೆದುಕೊಂಡು ಹೋದಾಗ, ಕಾಟೇರ ಒಂದು ಕ್ಷಣ ತಿರುಗಿ ಕರೆಪ್ಪನನ್ನು ನೋಡಿತು. ಅದರ ಕಣ್ಣಲ್ಲಿ ಅಸಹಾಯಕತೆ ಮತ್ತು ಅಗಲಿಕೆಯ ಕಣ್ಣೀರಿತ್ತು. ಸಂಜೆ ವೇಳೆ ಕೆರೆಯ ಬದಿಯಲ್ಲಿ ಕುಳಿತು ಹಣ ಎಣಿಸಿದಾಗ ಕರೆಪ್ಪನ ಜಗತ್ತು ಕತ್ತಲಾಗಿ ಹೋಯಿತು.

ನಡುವೆ ಕೇವಲ ಬಿಳಿ ಕಾಗದಗಳು ಮತ್ತು ಬಣ್ಣದ ಚೂರುಗಳು! "ಭಗವಂತಾ, ನನಗೆ ಯಾಕೆ ಇಂಥ ಶಿಕ್ಷೆ? ನಾನು ಯಾರಿಗೂ ದ್ರೋಹ ಮಾಡಿಲ್ಲವಲ್ಲ?" ಎಂದು ಕೂಗಾಡಿದ. ಅವನ ಕಿರುಚಾಟಕ್ಕೆ ಕೆರೆಯ ಹಕ್ಕಿಗಳು ಬೆದರಿ ಹಾರಿದವು. ಮನೆಗೆ ಹಿಂದಿರುಗುವಾಗ ಸ್ನೇಹಾ ದಾರಿಯಲ್ಲೇ ನಿಂತಿದ್ದಳು. ಅವಳು ಇವನ ಮುಖ ನೋಡಿಯೇ ಎಲ್ಲವನ್ನೂ ಅರ್ಥ ಮಾಡಿಕೊಂಡಳು. ಆದರೆ ಕರೆಪ್ಪನ ಒಳಗಿದ್ದ ಬಂಡಾಯದ ಕಿಚ್ಚು ಆರಿರಲಿಲ್ಲ. ಅಂದು ರಾತ್ರಿ ಊರ ಹೊರವಲಯದಲ್ಲಿ ಲಾರಿಯೊಂದು ನಿಂತಿತ್ತು. ಕತ್ತಲಲ್ಲಿ ಲಾರಿಯ ಲೈಟುಗಳು ದೆವ್ವದ ಕಣ್ಣುಗಳಂತೆ ಕಾಣುತ್ತಿದ್ದವು. ರಂಗಪ್ಪ ಮತ್ತು ರಾಮಪ್ಪ ಮದ್ಯ ಕುಡಿಯುತ್ತಾ ಕುಳಿತಿದ್ದರು.

ಕರೆಪ್ಪ ಹತ್ತಿರ ಹೋಗಿ ಹಣದ ಕಂತೆಯನ್ನು ಅವರ ಮುಖಕ್ಕೆ ಎಸೆದ. "ಬಡವನ ಹೊಟ್ಟೆ ಹೊಡೆದು ಬಂಗಲೆ ಕಟ್ಟೋ ನೀವು ಮನುಷ್ಯರಾ? ಈ ಕುರಿಗಳಿಗಿರೋ ಸಂವೇದನೆ ಕೂಡ ನಿಮಗಿಲ್ಲ," ಎಂದು ಗುಡುಗಿದ. ರಂಗಪ್ಪ ಅಹಂಕಾರದಿಂದ ಅಂದ, "ಯಾರಲೇ ನೀನು? ನಮಗೆ ಬುದ್ಧಿ ಹೇಳಾಕ ಬಂದೀಯೇನೋ? ಮುಚ್ಚಕೊಂಡು ಹೋಗು ಇಲ್ಲಿಂದ, ಇಲ್ಲಾಂದ್ರೆ ನಿನ್ನನ್ನು ಈ ಉಳ್ಳಾಗಡ್ಡಿ ತರಹ ಸೀಳಿ ಬಿಡ್ತೀವಿ." ಕರೆಪ್ಪನ ರಕ್ತ ಕುದಿಯಿತು. ಇಡೀ ಊರೇ ನಡುಗುವಂತೆ ಅಬ್ಬರಿಸಿದ, "ಎದಿಗೆ ಒದಿಲೇನ ಮಗನ... ಮುಚ್ಚಕೊಂಡು ಹೋಗ ಯಾವಲೇ ನೀ! ನನ್ನ ಬೆವರಿನ ಬೆಲೆ ತಗೊಂಡು ನನಗೇ ಬೆದ-ರಿಕೆ ಹಾಕ್ತಿಯಾ? ನಿನ್ನಂತವರು ಬಾಳ ಬಂದಾರ ಹೋಗಾರ, ಈ ಕರಿಯನ್ನ ಮುಟ್ಟೋ ಗಂಡಸು ಇನ್ನು ಹುಟ್ಟಿಲ್ಲ! ತಿನ್ನಾಕ ಅನ್ನ ಇಲ್ಲದಿದ್ದರೂ ಪರವಾಗಿಲ್ಲ, ನಿನ್ನಂತ ಕಟುಕರಿಗೆ ಬೆನ್ನು ತೋರಿಸಲ್ಲ ಮಗನ!" ಗಲಾಟೆ ಶುರುವಾಯಿತು. ಕರೆಪ್ಪ ದೊಣ್ಣೆಯಿಂದ ಲಾರಿಯ ಬಾಗಿಲನ್ನು ಹೊಡೆದು ಪುಡಿ ಮಾಡಿದ. ಲಾರಿಯ ಒಳಗಿಂದ ಕಾಟೇರ ಬಲವಾಗಿ ಗುದ್ದಿ ಹೊರಗೆ ಬಂದಿತು. ಯಜಮಾನ ಮತ್ತು ಪ್ರಾಣಿಯ ನಡುವಿನ ಆ ಸಂಬಂಧ ಕಂಡು ದಲ್ಲಾಳಿಗಳ ಮೈ ನಡುಗಿತು.

"ಹೋಗಿಬಿಡಿ ಇಲ್ಲಿಂದ! ಈ ಮಣ್ಣು ನಿಮಗಲ್ಲ," ಎಂದು ಕರೆಪ್ಪ ಅಬ್ಬರಿಸಿದಾಗ ದಲ್ಲಾಳಿಗಳು ಪ್ರಾಣ ಉಳಿಸಿಕೊಳ್ಳಲು ಲಾರಿ ಬಿಟ್ಟು ಓಡಿಹೋದರು. ರಾತ್ರಿ ಹನ್ನೆರಡು ಗಂಟೆಗೆ ಕರೆಪ್ಪ, ಸ್ನೇಹಾ ಮತ್ತು ಕಾಟೇರ ಒಟ್ಟಾಗಿ ಊರ ಹಾದಿಯಲ್ಲಿ ನಡೆಯುತ್ತಿದ್ದರು. ಅಂದು ಹಸಿವಿನ ಸಂತೆ ಕೇವಲ ವ್ಯಾಪಾರವನ್ನು ಮುಗಿಸಿರಲಿಲ್ಲ, ಒಬ್ಬ ಮನುಷ್ಯನ ಅಂತರಂಗದ ಶಕ್ತಿಯನ್ನು ಎಚ್ಚ-ರಿಸಿತ್ತು. ಮಾನವೀಯತೆ ಮತ್ತು ಪ್ರೀತಿಯ ಮುಂದೆ ಕೋಟಿ ರೂಪಾಯಿಗಳ ವ್ಯವಹಾರವೂ ಶೂನ್ಯ ಎಂಬ ಸತ್ಯ ಆ ಕರಾಳ ರಾತ್ರಿಯ ನಂತರದ ಬೆಳಗಿನ ಸೂರ್ಯನಂತೆ ಪ್ರಕಾಶಮಾನವಾಗಿ ಹೊರಹೊಮ್ಮಿತು.



ಡಾ.ವೆಂಕಟೇಶ ಗುಡೆಪ್ಪನವರ ಉತ್ತೂರ
ತಾ.ಮುಧೋಳ ಜಿ.ಬಾಗಲಕೋಟೆ
ಮೋ.9902457371

# ಟಿ.ಎ.ನಾರಾಯಣಗೌಡರ ಜನ್ಮದಿನಾಚರಣೆ ಪ್ರಯುಕ್ತ ವಿಶೇಷ ಕಾರ್ಯಕ್ರಮ

ಅ.ಶ. ಸುದ್ದಿ ಕೊಪ್ಪಳ

**ಕರ್ನಾಟಕ ರಕ್ಷಣಾ ವೇದಿಕೆ ಗಂಗಾವತಿ ತಾಲೂಕು ಘಟಕ, ನಗರ ಘಟಕ, ಅಧ್ಯಕ್ಷರು ಉಪಾಧ್ಯಕ್ಷರು ಹಾಗೂ ಪದಾಧಿಕಾರಿಗಳ ವತಿಯಿಂದ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷರು, ನಾಡು-ನುಡಿ-ನೆಲ-ಜಲದ ಪರ ಹೋರಾಟಗಾರರು ಹಾಗೂ ಕನ್ನಡಿಗರ ಹಕ್ಕುಗಳಿಗಾಗಿ ಅವಿರತವಾಗಿ ಶ್ರಮಿಸುತ್ತಿರುವ ಟಿ.ಎ.ನಾರಾಯಣಗೌಡರವರ 60ನೇ ವರ್ಷದ ಜನ್ಮದಿನದ ಅಂಗವಾಗಿ ಸಿ.ಪಿ.ಎಸ್. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಸಸಿ ನೆಡುವ, ಮತ್ತು ಇದೇ ಸಂದರ್ಭದಲ್ಲಿ ನಗರದ ವೃದ್ಧಾಶ್ರಮಕ್ಕೆ ಭೇಟಿ ನೀಡಿದ ಕರವೇ ಪದಾಧಿಕಾರಿಗಳು, ಅಲ್ಲಿನ ಹಿರಿಯ ನಾಗರಿಕರಿಗೆ ಅನ್ನಸಂತರ್ಪಣೆ ಮಾಡಿಸಿ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಿದರು.**

ಹಿರಿಯರ ಆಶೀರ್ವಾದ ಪಡೆದು ಸಮಾಜ ಸೇವೆಯ ಸಂಕಲ್ಪವನ್ನು ವ್ಯಕ್ತಪಡಿಸಿದರು ಮೂಲಕ ಬುಧವಾರ ಯಶಸ್ವಿಯಾಗಿ ಆಯೋಜಿಸಲಾಯಿತು. ಕರವೇ ರಾಜ್ಯ ಸಂಘಟನೆ ಕಾರ್ಯದರ್ಶಿ ಬಸವನಗೌಡ ಪೊಲೀಸ್ ಪಾಟೀಲ್ ಮಾತನಾಡಿ ಪ್ರತಿವರ್ಷ ನಮ್ಮ ರಾಜ್ಯಾಧ್ಯಕ್ಷರಾದ ಟಿ.ಎ. ನಾರಾಯಣಗೌಡ್ರು ಹುಟ್ಟು ಹಬ್ಬದ ಪ್ರಯುಕ್ತ ಸಾಮಾಜಿಕ ಸೇವೆಯನ್ನು ಮಾಡುತ್ತಾ ಬಂದಿದ್ದೇವೆ ಶಾಲಾ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಕರವೇ ಪದಾಧಿಕಾರಿಗಳು ಪರಿಸರ ಸಂರಕ್ಷಣೆಯ ಮಹತ್ವವನ್ನು ತಿಳಿಸಿ ವಿವಿಧ ಜಾತಿಯ ಸಸಿಗಳನ್ನು ನೆಟ್ಟು ಹಸಿರು ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ನಂತರ ಮಾತನಾಡಿದ ಗಂಗಾವತಿ ತಾಲೂಕು ಅಧ್ಯಕ್ಷ ಮಲ್ಲಿಕಾರ್ಜುನ ಗಿಣಿಮೋತಿ ನಾನು ಕರವೇ ಅಧ್ಯಕ್ಷ ಆದ ನಂತರ ಗಂಗಾವತಿಯಲ್ಲಿ ವಿವಿಧ ಸಮಸ್ಯೆಗಳಿಗೆ ನಮ್ಮ ಕರವೇ ಸಂಘಟನೆಯ ಮೂಲಕ ಹೋರಾಟ .ಮಾಡುತ್ತಾ ಬಂದಿದ್ದೇವೆ ನಮ್ಮ ರಾಜ್ಯಾಧ್ಯಕ್ಷರಾದ ಟಿ.ಎ.ನಾರಾಯಣಗೌಡು ರಾಜ್ಯ ಕಾರ್ಯದರ್ಶಿಗಳು ಕೊಪ್ಪಳ ಜಿಲ್ಲಾಧ್ಯಕ್ಷರು ಸಲಹೆಯನ್ನು ಪಡೆದುಕೊಂಡರು ನಾವು ಮುಂದಿನ ದಿನಗಳಲ್ಲಿ ದೊಡ್ಡ ದೊಡ್ಡ ಪ್ರಮಾಣದಲ್ಲಿ ಹೋರಾಟ ಮಾಡುತ್ತೇವೆ ನಮ್ಮ ಗಂಗಾವತಿ ತಾಲೂಕು ಘಟಕ ಹಾಗೂ ನಗರ ಘಟಕ ಅಧ್ಯಕ್ಷರು ಉಪಾಧ್ಯಕ್ಷರು ಸರ್ವ ಸದಸ್ಯರು ನಿಮ್ಮ ಜೊತೆಗೆ ಯಾವಾಗಲೂ ಇರುತ್ತೇವೆ ಆದಕಾರಣ ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು,

ಮುಂದಿನ ಪೀಳಿಗೆಗೆ ಉತ್ತಮ ಪರಿಸರವನ್ನು ಉಳಿಸುವ ಸಂಕಲ್ಪದೊಂದಿಗೆ ನಾವು ಯಾವಾಗಲೂ ಕೈ ಜೋಡಿಸುತ್ತೇವೆ ಎಂದು ಭರವಸೆಯನ್ನು ನೀಡಿದರು. ಕಾರ್ಯಕ್ರಮದಲ್ಲಿ ಶಾಲೆ ಮುಖ್ಯೋಪಾಧ್ಯಾಯ ಶಿವಪುತ್ರಪ್ಪ ಹೆಚ್.ಎಂ, ಕರವೇ ತಾಲೂಕು ಉಪಾಧ್ಯಕ್ಷ ಮೌನೇಶ ಸುಳೇಕಲ್, ತಾಲೂಕು ಸಮಾಜಿಕ ಜಾಲತಾಣ ಪ್ರಮುಖರಾದ ಶಬ್ಬೀರ್ ಪಾಷ, ಕರವೇ ಕಾರ್ಯಕರ್ತರಾದ ದೇವೇಂದ್ರಪ್ಪ ಗಿಣಿಮೋತಿ, ಹನುಮೇಶ, ಯಮನೂರ, ಅಪ್ಪು, ಅಜಯಕುಮಾರ, ಶಾಲೆ ಸಹ ಶಿಕ್ಷಕ ಶಿವಕುಮಾರ್ ಸೇರಿದಂತೆ ಇತರರು ಇದ್ದರು.



## ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಗೌರವ ಸನ್ಮಾನ.

ಅ.ಶ. ಸುದ್ದಿ ಕಾರಟಗಿ

**ಕಾರಟಗಿ: ವಿಧ್ಯಾರ್ಥಿಗಳು ಜಾಲಿ ಮರ ಆಗಬಾರದು ಹೂವಿನ ಗಿಡದಂತಾಗಬೇಕು , ನಿಮಗೆ ನೀಡುವ ಪ್ರತಿಭಾ ಪುರಸ್ಕಾರ ನಿಮ್ಮ ಭವಿಷ್ಯದ ಜವಾಬ್ದಾರಿಯನ್ನು ಹೆಚ್ಚಿಸುತ್ತದೆ ಎಂದು ಅಗ್ನಿಕೊಂಡ ದ್ಯಾಮಮ್ಮ ದೇವಿಯ ಆರಾಧಕರಾದ ಅಪ್ಪಾಜಿಯವರು ಹೇಳಿದರು. ಪಟ್ಟಣದ ಕನಕ ಭವನದಲ್ಲಿ ತಾಲೂಕು ಕುರುಬರ ಸಂಘ ಹಾಗೂ ಕನಕ ನೌಕರರ ಸಂಘದ ವತಿಯಿಂದ 'ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿ ವಿದ್ಯಾರ್ಥಿಗಳಿಗೆ ಆಶೀರ್ವಚನ ಮಾಡಿದರು.**



ತಾಲೂಕಿನ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಪ್ರತಿಭಾವಂತ ವಿದ್ಯಾರ್ಥಿಗಳು ಹಾಗೂ ಸಾಧಕರನ್ನು ಗುರುತಿಸಿ ಹಾಲುಮತ ಸಮಾಜದ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಕಾರ್ಯಕ್ರವನ್ನು ಆಯೋಜಿಸಲಾಯಿತು. ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ 40 ಕ್ಕೂ ಅಧಿಕ ವಿದ್ಯಾರ್ಥಿ ಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ ಶ್ರೀ ಸಿದ್ದರಾಮಯ್ಯ ಗುರುವಿನ ಮಹಾ ಸ್ವಾಮಿಗಳು ಬಸಪಟ್ಟಣ ಅವರು ಮಾತನಾಡಿ ವಿದ್ಯಾರ್ಥಿಗಳು ಕನಸು ಕಾಣಬೇಕು ಅದು ರಾತ್ರಿ ಕಾಣುವ ಕನಸಾಗಿರಬಾರದು. ಬದಲಾಗಿ ಜೀವನದ ಉತ್ತಮ ಭವಿಷ್ಯ ರೂಪಿಸಿಕೊಳ್ಳುವ ಗುರಿ ತಲುಪುವ ಕನಸು ಕಾಣಬೇಕು ಆ ಕನಸು ನನಸು ಮಾಡುವ ನಿಟ್ಟಿನಲ್ಲಿ ಪ್ರಯತ್ನಗಳ ನಡೆಸಬೇಕು. ಪ್ರತಿಯೊಬ್ಬ ವಿದ್ಯಾರ್ಥಿ ತಂದೆ ತಾಯಿಯ ಮಾತು ಕೇಳಬೇಕು ಗೌರವಿಸಬೇಕು ಎಂದು ವಿದ್ಯಾರ್ಥಿಗಳಿಗೆ ಪ್ರೇರಣಾದಾಯಕ ಹಿತ ವಚನ ಬೋಧಿಸಿದರು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ ಮಾದಯ್ಯ ಗುರುವಿನ ಮಹಾಸ್ವಾಮಿಗಳು ತುರವಿಹಾಳ. ಶ್ರೀ ಭೀಮಪ್ಪ ಅಜ್ಜ ಅಗ್ನಿಕೊಂಡ ದ್ಯಾವಮ್ಮ ದೇವಿ ಆರಾಧಕರು ಶ್ರೀ ಸಿದ್ದರಾಮಯ್ಯ ಗುರುವಿನ ಮಹಾ ಸ್ವಾಮಿಗಳು ಬಸಪಟ್ಟಣ ಶ್ರೀ ದಿನ ಗೆಡ್ಡೆಪ್ಪ ಮಹಾಸ್ವಾಮಿಗಳು ವಹಿಸಿಕೊಂಡಿದ್ದರು. ಕಾರ್ಯಕ್ರಮದಲ್ಲಿ ಕಾರಟಗಿ ತಾಲೂಕ ಹಾಲುಮತ ಸಮಾಜದ ತಾಲೂಕ ಅಧ್ಯಕ್ಷರಾದ ಶ್ರೀ ಉಮೇಶ್ ಬಂಗಿ ಕುರುಬ ನೌಕರರ ಸಂಘದ ತಾಲೂಕ ಅಧ್ಯಕ್ಷರಾದ ವಿಠ್ಠಲ್ ಜೀರಗಾಳಿ ವೀರೇಶ್ ಸಾಲೋಣಿ ಮಾಜಿ ಜಿಲ್ಲಾ ಪಂಚಾಯತಿ ಸದಸ್ಯರು. ಮಲ್ಲಿಕಾರ್ಜುನ ಕುರುಬ ಮಹಾಸಭಾ ರಾಜ್ಯಾಧ್ಯಕ್ಷರು.ಭೀಮಣ್ಣ ಕರಡಿ ಪ್ರಧಾನ ಕಾರ್ಯದರ್ಶಿಗಳು ಮಂಜುನಾಥ್ ಮೇಗೂರು ಪುರಸಭೆ ಅಧ್ಯಕ್ಷರು. ಸಾಬಣ್ಣ ಕಟ್ಟಿಕಾರ್ ಪುರಸಭೆ ಮುಖ್ಯ ಅಧಿಕಾರಿಗಳು. ಡಾಕ್ಟರ್ ವೀರಭದ್ರಗೌಡ ಮಕ್ಕಳ ತಜ್ಞರು. ಮರಿಯಪ್ಪ ಸಾಲೊನಿ. ರಮೇಶ್ ಕುಂಟೋಜಿ ಉಮೇಶ್ ಗು-ರಿಕಾರ್ ಉಪನ್ಯಾಸಕರು. ನಾಗರಾಜ ಹುಡೇದ ಉಪನ್ಯಾಸಕರು ಅಯ್ಯಪ್ಪ ಯರಡೋಣ.ನರಸಿಂಗ್ ಸಿದ್ದಾಪುರ ಕೆಇಬಿ. ದ್ಯಾಮಣ್ಣ ಬೆನಕಟ್ಟಿ ಶಿಕ್ಷಕರು. ರಾಮಚಂದ್ರ ವಕೀಲರು ಗಂಗೂಬಾಯಿ ಟೀಚರ್ ವೀರೇಶ್ ವಿದ್ಯಾ ಭಾರತಿ ಪ್ರಿನ್ಸಿಪಾಲರು ರಮೇಶ್ ಸಾಲೋಣಿ ಪಂಪಾಪತಿ ಈಳಿಗನೂರು ಸೇರಿದಂತೆ ಹಲವು ಹಾಲುಮತ ಸಮಾಜದ ಮುಖಂಡರುಗಳು ಉಪಸ್ಥಿತರಿದ್ದರು.

### ರಾಜ್ಯದಲ್ಲಿ ನೈತಿಕ ಪೊಲೀಸ್ ಗಿರಿ, ಗಾಂಜಾ ದಂಧೆ, ನಕಲಿ ಗೋರಕ್ಷಕರ ಹಾವಳಿ ಹಾಗೂ ರೌಡಿಸಂ ಅನ್ನು ಮಟ್ಟಹಾಕಿ,

# ಸಮಾಜಘಾತುಕ ಶಕ್ತಿಗಳನ್ನು ಗಡಿಪಾರಿಗೆ ಆಗ್ರಹ.

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ರಾಜ್ಯದಲ್ಲಿ ನೈತಿಕ ಪೊಲೀಸ್ ಗಿರಿ, ಗಾಂಜಾ ದಂಧೆ, ನಕಲಿ ಗೋರಕ್ಷಕರ ಹಾವಳಿ ಹಾಗೂ ರೌಡಿಸಂ ಅನ್ನು ಮಟ್ಟಹಾಕಿ, ಸಮಾಜಘಾತುಕ ಖಶಕ್ತಿಗಳನ್ನು ಗಡಿಪಾರು ಮಾಡುವ ಮೂಲಕ ನಾಗರಿಕರು ಮತ್ತು ರೈತರು ನೆಮ್ಮದಿಯಿಂದ ಜೀವಿಸಲು ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಜಿಲ್ಲಾಧಿಕಾರಿ ಸುರೇಶ್ ಇಟ್ನಾಳ ಅವರ ಮೂಲಕ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಗೃಹ ಸಚಿವ ಪ್ರಿಯಾಂಕ ಖರ್ಗೆ ಅವರಿಗೆ ಜನಪರ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ವಿವಿಧ ಸಂಘಟನೆಗಳಿಂದ ಗುರುವಾರ ಮನವಿ ಸಲ್ಲಿಸಲಾಯಿತು.**

ಕೆಲವು ತಿಂಗಳುಗಳ ಹಿಂದೆ ಮಂಗಳೂರು ಸೇರಿದಂತೆ ಕರಾವಳಿ ಭಾಗದಲ್ಲಿ ಗೋ ಸಾಗಾಟದ ನೆಪದಲ್ಲಿ ಪೊಲೀಸರ ಸಮ್ಮುಖದಲ್ಲೇ ಮಾರಕಾಸ್ತ್ರಗಳನ್ನು ಪ್ರದರ್ಶಿಸುತ್ತಾ, ವಾಹನಗಳನ್ನು ತಡೆದು ದಾಂಧಲೆ ನಡೆಸಿದ ದೃಶ್ಯಗಳು ಸಾಮಾಜಿ-ಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹ-ರಿದಾಡಿವೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ನಿರಂತರವಾಗಿ ನಡೆಯುತ್ತಿರುವ ಗುಂಪು ಹಲ್ಲೆಗಳು ಹಾಗೂ "ನೈತಿಕ ಪೊಲೀಸ್ ಗಿರಿ" (Moral Policing) ಘಟನೆಗಳು ಇಡೀ ರಾಜ್ಯಕ್ಕೆ ಕೆಟ್ಟ ಮಾದರಿಯಾಗುತ್ತಿವೆ. ಪೊಲೀಸರ ಭಯವಿಲ್ಲದೆ ಕಾನೂನನ್ನು ಕೈಗೆತ್ತಿಕೊಳ್ಳುವ ಇಂತಹ ದುಷ್ಕರ್ಮಿಗಳು, ವ್ಯವಸ್ಥಿತ ರೌಡಿಗಳಾಗಿ ಪರಿವರ್ತನೆಗೊಂಡು ಸಾರ್ವಜನಿಕ ಶಾಂತಿಗೆ ಭಂಗ ತರುತ್ತಿದ್ದಾರೆ. ಇದರೊಂದಿಗೆ, ರಾಜ್ಯಾದ್ಯಂತ ಗಾಂಜಾ ಮಾರಾಟ ಮತ್ತು ಸೇವನೆ ಅವ್ಯಾಹತವಾಗಿ ನಡೆಯುತ್ತಿದ್ದು, ಯುವ ಪೀಳಿಗೆ ಹಾದಿತಪ್ಪುತ್ತಿದೆ.

ಸ್ಥಳೀಯ ಪೊಲೀಸ್ ಸಿಬ್ಬಂದಿಗೆ ಇದರ ಸಂಪೂರ್ಣ ಮಾಹಿತಿ ಇದ್ದಾಗ್ಯೂ, ಸ್ಥಳೀಯ ರಾಜಕೀಯ ನಾಯಕರ ಹಸ್ತಕ್ಷೇಪದಿಂದಾಗಿ ಅಥವಾ ಯಾವುದೋ ಕಾರಣಕ್ಕೆ ಇಂತಹ ಪ್ರಕರಣಗಳನ್ನು ಮುಚ್ಚಿಹಾಕಲಾಗುತ್ತಿದೆ. ದೌರ್ಜನ್ಯಕ್ಕೆ ಒಳಗಾದವರು ದೂರು ನೀಡಲು ಮುಂದಾದರೆ, ಪೊಲೀಸರೇ ಆರೋಪಿಗಳಿಂದ ಪ್ರತಿ ದೂರು ಕೊಡಿಸಿ, ಎರಡೂ ಕಡೆಯವರನ್ನು ಹೆದರಿಸಿ ಪ್ರಕರಣವನ್ನು ಕೈಬಿಡುತ್ತಿರುವ ನಿದರ್ಶನಗಳು ಹೆಚ್ಚಾಗುತ್ತಿವೆ.

***ವಿಶೇಷವಾಗಿ ಕೊಪ್ಪಳ ಜಿಲ್ಲೆಯ ಪರಿಸ್ಥಿತಿ:*** ಇತ್ತೀಚೆಗೆ ಜಿಲ್ಲೆಯಲ್ಲಿ ಇಂತಹ ಹಲವು ಘಟನೆಗಳು ನಡೆದಿದ್ದರೂ ಎಫ್.ಐ.ಆರ್. ದಾಖಲಿಸದೆ ಪ್ರಕರಣಗಳನ್ನು ಮುಚ್ಚಿ ಹಾಕಲಾಗುತ್ತಿದೆ. ಅದರಲ್ಲೂ ಮುಖ್ಯವಾಗಿ,ಕೊಪ್ಪಳ ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ "ಗೋರಕ್ಷಕರು" ಎಂಬ ಸೋಗಿನಲ್ಲಿ ತಿರುಗುವ ದುಷ್ಕರ್ಮಿಗಳ ಮತ್ತು ರೌಡಿ ಶೀಟರ್‌ಗಳ ಹಾವಳಿ ಹೆಚ್ಚಾಗಿದೆ.

ಇವರು ಗ್ರಾಮೀಣ ಭಾಗದ ಮುಗ್ಧ ರೈತರನ್ನು ಗುರಿಯಾಗಿಸಿಕೊಂಡು, ರೈತರು ತಮ್ಮ ದನಗಳನ್ನು ಮುಕ್ತವಾಗಿ ಮಾರಾಟ ಮಾಡಲು ಅಥವಾ ಸಾಗಾಟ ಮಾಡಲು ಅಡ್ಡಿಪಡಿಸುತ್ತಿದ್ದಾರೆ. ರೈತರ ಮೇಲೆ ದೌರ್ಜನ್ಯ ನಡೆಸಿ, ಹೆದರಿಸಿ ಹಣ ವಸೂಲಿ ಮಾಡುವ ದಂಧೆ ಅವಿರತವಾಗಿ ನಡೆಯುತ್ತಿದೆ. ಇದ-ರಿಂದಾಗಿ ಕೃಷಿ ಬಿಕ್ಕಟ್ಟಿನಲ್ಲಿರುವ ರೈತರು ತಮ್ಮ ಜಾನುವಾರುಗಳನ್ನು ಮುಕ್ತವಾಗಿ ವ್ಯಾಪಾರ ಮಾಡಲಾಗದೆ ಆರ್ಥಿಕವಾಗಿ ಮತ್ತಷ್ಟು ಕಂಗಾಲಾಗಿದ್ದಾರೆ. ಅಲ್ಲದೆ,ಸಾಮಾನ್ಯ ಜನರಲ್ಲಿ ಭಯದ ವಾತಾವರಣ ಸೃಷ್ಟಿಸುತ್ತಿರುವ ಸ್ಥಳೀಯ ನಕಲಿ ಗೋ ರಕ್ಷಕರ ವಿರುದ್ಧ ರೌಡಿಶೀಟರ್ ಪ್ರಕರಣ ದಾಖಲಿಸಬೇಕು.

***ನಮ್ಮ ಪ್ರಮುಖ ಆಗ್ರಹಗಳು:*** ರೌಡಿ ಶೀಟರ್‌ಗಳ ಗಡಿಪಾರು ಮತ್ತು ಕಠಿಣ ಕ್ರಮ, ಸಾರ್ವಜನಿಕ ನೆಮ್ಮದಿಗೆ ಭಂಗ ತರುತ್ತಿರುವ, ನೈತಿಕ ಪೊಲೀಸ್ ಗಿರಿ ನಡೆಸುವ ಮತ್ತು ರೈತ-ರಿಗೆ ಬೆದರಿಕೆ ಹಾಕುವ ದುಷ್ಕರ್ಮಿಗಳ ಮೇಲೆ ರೌಡಿ ಶೀಟರ್ ಪ್ರಕರಣ ದಾಖಲಿಸಿ. ತಕ್ಷಣವೇ ಸಮಾಜದಲ್ಲಿ ಶಾಂತಿ ಕದಡುವವರನ್ನು ಗುರುತಿಸಿ, ಅವರನ್ನು ಆಯಾ ಜಿಲ್ಲೆಗಳಿಂದ ಕಟ್ಟುನಿಟ್ಟಾಗಿ ಗಡಿಪಾರು ಮಾಡಬೇಕು. ಅವರ ಅಕ್ರಮ ಆಸ್ತಿಪಾಸ್ತಿಗಳ ಮೇಲೆ ಕಾನೂನು ರೀತ್ಯಾ ದಾಳಿ ನಡೆಸಿ,ಮುಟ್ಟುಗೋಲು ಹಾಕಿಕೊಳ್ಳಬೇಕು.

***ವಿಶೇಷ ತನಿಖಾ ತಂಡ ರಚನೆ:*** ಪ್ರತಿ ಜಿಲ್ಲೆಯಲ್ಲೂ ಪ್ರಾಮಾಣಿಕ ಮತ್ತು ದಕ್ಷ ಪೊಲೀಸ್ ಅಧಿಕಾರಿಗಳ ವಿಶೇಷ ತಂಡವನ್ನು ರಚಿಸಿ, ನೈತಿಕ ಪೊಲೀಸ್ ಗಿರಿ, ರೌಡಿಸಂ ಮತ್ತು ಗಾಂಜಾ ದಂಧೆಯ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು.


***ನಕಲಿ ಗೋರಕ್ಷಕರ ವಿರುದ್ಧ ಕಠಿಣ ಕಾನೂನು ಕ್ರಮ:*** ಕೊಪ್ಪಳ ಜಿಲ್ಲೆ ಸೇ-ರಿದಂತೆ ರಾಜ್ಯಾದ್ಯಂತ ರೈತರಿಗೆ ಮುಕ್ತವಾಗಿ ದನಗಳನ್ನು ಮಾರಾಟ ಮಾಡಲು ಮತ್ತು ಖರೀದಿಸಿ ಸಾಗಿಸಲು ಸಂಪೂರ್ಣ ರಕ್ಷಣೆ ನೀಡಬೇಕು. ರೈತರಿಗೆ ಕಿರುಕುಳ ನೀಡುವ ನಕಲಿ ಗೋರಕ್ಷಕರನ್ನು ತಕ್ಷಣವೇ ರೌಡಿಶೀಟ-ರ್ ಪಟ್ಟಿಗೆ ಸೇರಿಸಿ ಜೈಲಿಗಟ್ಟಬೇಕು.

***ಗಾಂಜಾ ದಂಧೆಕೋರರಿಗೆ ಕಠಿಣ ಶಿಕ್ಷೆ:*** ಗಾಂಜಾ ಮಾರಾಟ ಮತ್ತು ಸೇವನೆ ಮಾಡುವವರ ವಿರುದ್ಧದ ಕಾನೂನನ್ನು ಮತ್ತಷ್ಟು ಬಿಗಿಗೊಳಿಸಬೇಕು. ಇಂತಹ ಕೃತ್ಯಗಳಲ್ಲಿ ಭಾಗಿಯಾಗುವವರನ್ನು ಜಿಲ್ಲೆಯಿಂದ ಗಡಿಪಾರು ಮಾಡುವುದರ ಜೊತೆಗೆ, ಅವರಿಗೆ ವಿಧಿಸುವ ದಂಡದ ಮೊತ್ತವನ್ನು ದುಪ್ಪಟ್ಟುಗೊಳಿಸಬೇಕು ಮತ್ತು ಕಠಿಣ ಕಾರಾಗೃಹ ಶಿಕ್ಷೆ ವಿಧಿಸಬೇಕು.

***ರಾಜಕೀಯ ಹಸ್ತಕ್ಷೇಪಕ್ಕೆ ತಡೆ:*** ಗಾಂಜಾ ಮಾರಾಟಗಾರರು, ರೌಡಿ ಶೀಟ-ರ್‌ಗಳು, ಗುಂಪು ಹಲ್ಲೆಕೋರರು ಹಾಗೂ ನೈತಿ-ಕ ಪೊಲೀಸ್ ಗಿರಿ ನಡೆಸುವವರ ಪರವಾಗಿ ಯಾವುದೇ ಸಚಿವರು ಅಥವಾ ಶಾಸಕರು ಶಿಫಾರಸು ಮಾಡದಂತೆ ಸರ್ಕಾರದಿಂದ ಕಠಿಣ ತಾಕೀತು ಹೊರಡಿಸಬೇಕು.

ದುಷ್ಕರ್ಮಿಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡ ಪೊಲೀಸ್ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಗಾಂಜಾ ಮಾರಾಟ ಮತ್ತು ಸೇವಿಸುವವರ. ನೈತಿಕ ಪೊಲೀಸ್ ಗಿರಿ ಮಾಡುವವರ. ನಕಲಿ ಗೋ ರಕ್ಷಕರ. ರೌಡಿ ಶೀಟರ್ ಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡ ಪೊಲೀಸ್ ಅಧಿಕಾ-ರಿಗಳ ಮತ್ತು ಸಿಬ್ಬಂದಿಗಳ ವಿರುದ್ಧ ಗುಪ್ತ ತನಿಖೆ ನಡೆಸಿ ಕಠಿಣ ಕ್ರಮ ಕೈಗೊಳ್ಳಬೇಕು.

***ಪೊಲೀಸ್ ಹೊಣೆಗಾರಿಕೆ:** ಸಂತ್ರಸ್ತರು ದೂರು ನೀಡಿದಾಗ ಪ್ರತಿ ದೂರು ದಾಖಲಿಸಿ ಪ್ರಕರಣ ಹಳ್ಳಹಿಡಿಸುವ, ರೌಡಿಗಳೊಂದಿಗೆ ಶಾಮೀಲಾಗುವ ಅಥವಾ ರಾಜಿ ಪಂಚಾಯಿತಿ ಮಾಡಲು ಒತ್ತಾಯಿಸುವ ಪೊಲೀಸ್ ಅಧಿಕಾರಿಗಳ ವಿರುದ್ಧವೇ ಇಲಾಖಾ ಶಿಸ್ತುಕ್ರಮ ಜರುಗಿಸಬೇಕು ಮತ್ತು ಅವರನ್ನು ಅಮಾನತುಗೊಳಿಸಬೇಕು. ಕರ್ನಾಟಕವನ್ನು ಕೋಮುವಾದಿಗಳು, ಕೊಲೆ ಆರೋಪಿಗಳು ಮತ್ತು ರೌಡಿಶೀಟರ್‌ಗಳ ಹಿಡಿತದಿಂದ ಮುಕ್ತಗೊಳಿಸಿ, ಜಾತ್ಯಾತೀತ ಹಾಗೂ ನಿಷ್ಪಕ್ಷಪಾತ ಆಡಳಿತವನ್ನು ನೀಡುವ ಮೂಲಕ ನಾಗರಿಕರು ಮತ್ತು ರೈತರು ನೆಮ್ಮದಿಯಿಂದ ಬದುಕುವ ವಾತಾವರಣ ನಿರ್ಮಿಸಿಕೊಡಬೇಕಾಗಿ ಈ ಮೂಲಕ ಅತ್ಯಂತ ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇವೆ ಎಂದು ಜನಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಸ್.ಎ.ಗಫಾರ್. ಪ್ರಗತಿಪರ ಸಂಘಟನೆಗಳ ಒಕ್ಕೂಟದ ಮುಖ್ಯ ಸಂಚಾಲಕ ಬಸವರಾಜ್ ಶೀಲವಂತರ್. ಪಾಸ್ಟರ್ಸ್ ಅಸೋಸಿಯೇಷನ್ ಜಿಲ್ಲಾ ಅಧ್ಯಕ್ಷ ಚನ್ನಬಸಪ್ಪ ಅಪ್ಪಣ್ಣವರ್. ಶಿವಪ್ಪ ಹಡಪದ್ ಮುಂತಾದವರು ಕೋರಿದ್ದಾರೆ.



# ಸಿಂಧನೂರು ನಗರದ ವಿವಿಧ ಕಚೇರಿಗಳಿಗೆ ಜಿಲ್ಲಾಧಿಕಾರಿ ಪೂವಿತಾ ಎಸ್. ಅವರು ದಿಢೀರ್ ಭೇಟಿ ಪರಿಶೀಲನೆ

**ರಾಯಚೂರು: ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್. ಅವರು ಬುಧವಾರ ಬೆಳಿಗ್ಗೆ ಜಿಲ್ಲೆಯ ಸಿಂಧನೂರು ನಗರದ ವಿವಿಧ ಕಚೇರಿಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ಮಾಡಿದರು. ಮೊದಲು ಸಿಂಧನೂರಿನ ನಗರಸಭೆಗೆ ಆಗಮಿಸಿ, ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು ನಗರಸಭೆಯ ವ್ಯಾಪ್ತಿಯಲ್ಲಿ ಸರಿಯಾಗಿ ಕಾಲಕಾಲಕ್ಕೆ ತೆರಿಗೆ ಸಂಗ್ರಹಿಸಬೇಕು. ನಗರದ ಜನರಿಗೆ ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು.**

ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ಮುಂಗಾರು ಮಳೆ ಹೆಚ್ಚಿನ ಪ್ರಮಾಣದಲ್ಲಿ ಬರುವ ಸಾಧ್ಯತೆ ಇದೆ. ಆದ್ದರಿಂದ ಕುಡಿಯುವ ನೀರನ್ನು ಆಗಾಗ ಪರೀಕ್ಷೆ ಮಾಡಿ, ಶುದ್ಧ ಕುಡಿಯುವ ನೀರು ಪೂರೈಕೆಗೆ ಗಮನ ಹರಿಸಬೇಕು ಎಂದು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು. ಮಳೆಗಾಲದಲ್ಲಿ ಸಾಂಕ್ರಾಮಿಕ ರೋಗ ಹರಡದಂತೆ ಮುಂಜಾಗ್ರತೆವಹಿಸಬೇಕು. ಮಳೆ ನೀರು ಸರಾಗವಾಗಿ ಹರಿಯುವಂತಾಗಲು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕಾಲುವೆ, ಚರಂಡಿಗಳನ್ನು ಸ್ವಚ್ಛಗೊಳಿಸುವ ಕಾರ್ಯ ಆಗಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ನಂತರ ಸಿಂಧನೂರು ನಗರದ ವಿವಿಧ ರಸಗೊಬ್ಬರ ಹಾಗೂ ಕೀಟ ನಾಶಕ ಅಂಗಡಿಗಳಿಗೆ ಭೇಟಿ ನೀಡಿ, ದಾಸ್ತಾನು ಪುಸಕ್ತ, ರಶೀದಿ ಪುಸ್ತಕಗಳನ್ನು ಪರಿಶೀಲಿಸಿದರು. ಅಲ್ಲದೇ ಗ್ರಾಹಕರಿಗೆ ಯಾವ ದರದಲ್ಲಿ ಇವುಗಳನ್ನು ಮಾರಾಟ ಮಡಲಾಗುತ್ತಿದೆ. ದರ ಪಟ್ಟಿಯನ್ನು ಹಾಕಲಾಗಿದೆಯೇ ಎಂಬ ಬಗ್ಗೆ ಮಾಹಿತಿ ಪಡೆದರು. ರೈತರಿಗೆ ಅನುಕೂಲವಾಗುಂತೆ ರಸ ಗೊಬ್ಬರ ದಾಸ್ತಾನು ಮಾಡಬೇಕೆಂದು ಅಂಗಡಿಯ ಮಾಲೀಕರಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು. ನಂತರ ಬಸ್ ನಿಲ್ದಾಣದ ಹತ್ತಿರವಿರುವ ಇಂದಿರಾ ಕ್ಯಾಂಟೀನ್ ಗೆ ಭೇಟಿ ನೀಡಿ, ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಊಟ, ತಿಂಡಿ ಪೂರೈಸುವ ಉದ್ದೇಶದಿಂದ ಸರ್ಕಾರ ಇಂದಿರಾ ಕ್ಯಾಂಟೀನ್‌ಗಳನ್ನು ಆರಂಭಿಸಿದೆ.

ಕಡಿಮೆ ವೆಚ್ಚದ ಆಹಾರಗಳನ್ನು ಪೂರೈಕೆ ಮಾಡುವ ಜೊತೆಗೆ ಕ್ಯಾಟೀನ್‌ನಲ್ಲಿ ಸ್ವಚ್ಛತೆ ಮತ್ತು ಗ್ರಾಹಕರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಬೇಕೆಂದು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು. ನಂತರ ಸಿಂಧನೂರಿನ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಜಿಲ್ಲಾಧಿಕಾರಿ ಪೂವಿತಾ ಎಸ್. ದಿಢೀರ್ ಭೇಟಿ ನೀಡಿ, ಆಸ್ಪತ್ರೆಯ ಮೂಲಸೌಕರ್ಯ ಹಾಗೂ ಕುಂದು ಕೊರತೆಗಳ ಬಗ್ಗೆ ಪರಿಶೀಲಿಸಿದರು. ಸಿಬ್ಬಂದಿಯ ಹಾಜರಾತಿ ಪುಸ್ತಕ, ಕಚೇರಿ ಖರ್ಚು ವೆಚ್ಚದ ಕಡತಗಳನ್ನು ಪರಿಶೀಲಿಸಿ, ಸಮಯಕ್ಕೆ ಸರಿಯಾಗಿ ಕೆಲಸಕ್ಕೆ ಹಾಜರಿರಬೇಕು ಎಂದು ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿಗಳಿಗೆ ಸೂಚನೆ ನೀಡಿದರು. ನಂತರ ವಾರ್ಡ್‌ಗಳಿಗೆ ತೆರಳಿ ರೋಗಿಗಳ ಆರೋಗ್ಯ ವಿಚಾರಿಸಿದರು. ಔಷಧ ಉಗ್ರಾಣ ಪರಿಶೀಲಿಸಿ, ಔಷಧಗಳನ್ನು ರೋಗಿಗಳಿಗೆ ಸಮರ್ಪಕವಾಗಿ ವಿತರಣೆ ಮಾಡುವಂತೆ ಸೂಚಿಸಿದರು.

ಯಾವುದೇ ಕಾರಣಕ್ಕೂ ಖಾಸಗಿ ಔಷಧ ಅಂಗಡಿಗಳಲ್ಲಿ ಖರೀದಿಸಲು ಚೀಟಿ ಬರೆದುಕೊಟ್ಟಿದ್ದು ಕಂಡು ಬಂದಲ್ಲಿ ಶಿಸ್ತುಕ್ರಮ ಕೈಗೊಳ್ಳುವುದಾಗಿ ವೈದ್ಯರಿಗೆ ಎಚ್ಚರಿಕೆ ನೀಡಿದರು. ಆಸ್ಪತ್ರೆಯ ಸ್ವಚ್ಛತೆಗೆ ಒತ್ತು ನೀಡಬೇಕು, ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುವುದರ ಜೊತೆಗೆ ಸೌಜನ್ಯವಾಗಿ ವರ್ತಿಸಬೇಕು ಎಂದರು. ನಂತರ ಸಿಂಧನೂರಿನ ತಹಶಿಲ್ದಾರ್ ಕಚೇರಿಗೆ ಭೇಟಿ ನೀಡಿ, ವಿವಿಧ ಇಲಾಖೆಯ ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಜನರಿಗೆ ಉತ್ತಮ ಆಡಳಿತ ನೀಡಬೇಕು. ಸಾರ್ವಜನಿಕರನ್ನು ವಿನಾ ಕಾರಣ ಅಲೆದಾಡುವುದನ್ನು ತಪ್ಪಿಸಬೇಕು ಎಂದು ಹೇಳಿದ ಜಿಲ್ಲಾಧಿಕಾರಿಗಳು ತಾಲೂಕು ಆಡಳಿತದ ಕಾರ್ಯಗಳ ಪ್ರಗತಿ ಪರಿಶೀಲಿಸಿ, ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿದರು. ಸಂಜೆ ತುರ್ವಿಹಾಳ ಗ್ರಾಮದಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಕೆರೆಯ ಅಭಿವೃದ್ಧಿ ಕಾಮಗಾರಿಯನ್ನು ವೀಕ್ಷಣೆ ಮಾಡಿದರು. ಇದೇ ಸಂದರ್ಭದಲ್ಲಿ ಲಿಂಗಸುಗೂರು ವಿಭಾಗದ ಸಹಾಯಕ ಆಯುಕ್ತ ಬಸವಣ್ಣೆಪ್ಪ ಕಲಶೆಟ್ಟಿ, ಸಿಂಧನೂರು ಪೌರಾಯುಕ್ತ ಪಾಂಡುರಂಗ ಇಟಗಿ, ಸಿಪಿಐ ವೀರರೆಡ್ಡಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.



AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka